# 7

# ವಿಷಯ – ಸೆಮೆಸ್ಟರ್ 1

D.Ed ತರಬೇತಿಯನ್ನು ಸೆಮೆಸ್ಟರ್ ರೀತಿಯಲ್ಲಿ ಕ್ರಮೀಕರಿಸಲಾಗಿದೆ. ಒಂದನೇ ಸೆಮೆಸ್ಟರ್ ($S_1$) ಪ್ರತಿವರ್ಷವೂ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳ ವರೆಗೆ ನಡೆಯುವುದು. ಎಲ್ಲಾ ಪೇಪರ್‌ಗಳಿಗೂ ನಿರಂತರ ಮೌಲ್ಯಮಾಪನವಿರುವುದು. ಆದರೆ ಅಂತಿಮ ಪರೀಕ್ಷೆಯು ಎಲ್ಲಾ ಪೇಪರ್‌ಗಳಿಗೆ ಇರುವುದಿಲ್ಲ. ಸೆಮೆಸ್ಟರ್ 1 ($S_1$) ರ ವಿವಿಧ ಪೇಪರ್‌ಗಳ ವಿವರಣೆಗಳನ್ನು ಕೆಳಗೆಕೊಡಲಾಗಿದೆ.

## 7.1 ಒಂದನೇ ಸೆಮೆಸ್ಟರ್ ($S_1$) ಪೇಪರುಗಳ ವಿವರಣೆಗಳು

ಒಂದನೇ ಸೆಮೆಸ್ಟರ್‌ನಲ್ಲಿ ಒಟ್ಟು 6 ಪೇಪರ್‌ಗಳಿವೆ. ವಿದ್ಯಾಭ್ಯಾಸ ಮನಃಶಾಸ್ತ್ರದಲ್ಲಿ ಲೀನವಾದ **ಶಿಶುವಿಕಾಸ ಮತ್ತು ಕಲಿಕೆ** ಎಂಬ ಪೇಪರ್ ಹಾಗೂ ಪಠ್ಯಪದ್ಧತಿ ಕುರಿತು ಪೆಡಗೋಜಿಯ ಕುರಿತೂ ಮೌಲ್ಯಮಾಪನದ ಕುರಿತೂ ತಿಳಿಯುವುದಕ್ಕಾಗಿ **ಪಠ್ಯಪದ್ಧತಿಯೂ ಬೋಧನಾ ಶಾಸ್ತ್ರವೂ** ಎಂಬ ಪೇಪರನ್ನು ಒಂದನೇ ಪೇಪರಿನಲ್ಲಿ ಅಳವಡಿಸಲಾಗಿದೆ. ಇದು ಮಾತ್ರವಲ್ಲದೆ ಮಾತೃ ಭಾಷಾಕಲಿಕೆಗಾಗಿ **ಕನ್ನಡ ಭಾಷೆಯ ಚರಿತ್ರೆ, ಸ್ವರೂಪ ಹಾಗೂ ಸಾಮಾಜಿಕ ಹಿನ್ನೆಲೆ** ಎಂಬ ಪೇಪರನ್ನು ನಿರ್ದೇಶಿಸಲಾಗಿದೆ. **"Proficiency in English Language"** ಎಂಬ ಪೇಪರ್ ಇಂಗ್ಲೀಷ್ ಭಾಷಾ ಕಲಿಕೆಗೆ ನಿರ್ದೇಶಿಸಲಾಗಿದೆ. ಪರಿಸರ ವಿಜ್ಞಾನಕ್ಕೆ ಸಂಬಂಧಿಸಿ 'ಪರಿಸರ ಒಂದು ಪಾಠಪುಸ್ತಕ' ಎಂಬ ಪೇಪರನ್ನೂ ಗಣಿತ ಕಲಿಕೆಗೆ ಸಂಬಂಧಪಟ್ಟು **'ಗಣಿತ ಶಾಸ್ತ್ರದ ಕಲಿಕೆ ಮತ್ತು ಸಮೀಪನೆ'** ಎಂಬ ಪೇಪರನ್ನು ನಿರ್ದೇಶಿಸಲಾಗಿದೆ. ಇದರಲ್ಲಿ ಶಿಶುವಿಕಾಸ ಮತ್ತು ಕಲಿಕೆ ಪಠ್ಯಪದ್ಧತಿಯೂ ಬೋಧನಾಶಾಸ್ತ್ರವೂ, ಕನ್ನಡ ಎಂಬಿವುಗಳಿಗೆ ಪ್ರತಿಯೊಂದಕ್ಕೂ 60 ಅಂಕಗಳ ಅಂತಿಮ ಪರೀಕ್ಷೆಯೂ 20 ಅಂಕಗಳ ನಿರಂತರ ಮೌಲ್ಯಮಾಪನವೂ ಇರುವುದು. ಉಳಿದ ವಿಷಯಗಳಾದ ಇಂಗ್ಲೀಷ್, ಭಾಷಾ ಕಲಿಕೆ,

## 7.2 ಒಂದನೇ ಸೆಮೆಸ್ಟರ್ ($S_1$) : ಪೇಪರ್ – ಅಂಕಗಳ ವಿವರಣೆಗಳು

| ಕ್ರಮ ಸಂಖ್ಯೆ | ಪೇಪರ್ ಸಂಖ್ಯೆ | ಪೇಪರಿನ ಹೆಸರು | ಅಂಕಗಳ ವಿವರಣೆಗಳು | | |
|---|---|---|---|---|---|
| | | | ನಿರಂತರ ಮೌಲ್ಯಮಾಪನ | ಥಿಯರಿ ಪರೀಕ್ಷೆ | ಒಟ್ಟು |
| 1 | $S_1 . P_1$ | ಶಿಶುವಿಕಾಸ ಮತ್ತು ಕಲಿಕೆ | 20 | 60 | 80 |
| 2 | $S_1 . P_2$ | ಪಠ್ಯಪದ್ಧತಿಯೂ ಬೋಧನಾಶಾಸ್ತ್ರವೂ | 20 | 60 | 80 |
| 3 | $S_1 . P_3$ | ಕನ್ನಡ ಭಾಷೆಯ ಚರಿತ್ರೆ, ಸ್ವರೂಪ ಹಾಗೂ ಸಾಮಾಜಿಕ ಹಿನ್ನೆಲೆ | 20 | 60 | 80 |
| 4 | $S_1 . P_4$ | Proficiency in English Language | 20 | - | 20 |
| 5 | $S_1 . P_5$ | ಪರಿಸರ ಒಂದು ಪಾಠಪುಸ್ತಕ | 20 | - | 20 |
| 6 | $S_1 . P_6$ | ಗಣಿತ ಶಾಸ್ತ್ರದ ಕಲಿಕೆ ಮತ್ತು ಸಮೀಪನೆ | 20 | - | 20 |
| | | **ಒಟ್ಟು** | **120** | **180** | **300** |

ಪರಿಸರ ವಿಜ್ಞಾನ ಕಲಿಕೆ, ಗಣಿತ ಶಾಸ್ತ್ರದ ಕಲಿಕೆ ಮತ್ತು ಸಮೀಪನೆ ಎಂಬಿವುಗಳಿಗೆ ನಿರಂತರ ಮೌಲ್ಯಮಾಪನ (20 ಅಂಕಗಳಂತೆ) ಮಾತ್ರವೇ ಇರುವುದು.

## 7.3 ಒಂದನೇ ಸೆಮೆಸ್ಟರಿನ ಪ್ರತಿಯೊಂದು ಪೇಪರಿಗೆ ಸಂಬಂಧಪಟ್ಟ ವಿವರಣೆಗಳು

### 7.3.1 ವಿದ್ಯಾಭ್ಯಾಸ ಮನೋವಿಜ್ಞಾನ

ಅಧ್ಯಾಪಕ ವಿದ್ಯಾರ್ಥಿಗಳಿಗೆ ಮನೋವಿಜ್ಞಾನದ ಅಡಿಪಾಯವನ್ನುಂಟು ಮಾಡುವುದಕ್ಕಾಗಿ ಒಂದನೇ ಸೆಮೆಸ್ಟರಿನಲ್ಲಿ **ಶಿಶುವಿಕಾಸ ಮತ್ತು ಕಲಿಕೆ** ಎಂಬ ಪೇಪರನ್ನು ಕಲಿಕೆಗಾಗಿ ನಿರ್ದೇಶಿಸಲಾಗಿದೆ. ವಿವರಣೆಗಳನ್ನು ಕೆಳಗೆಕೊಡಲಾಗಿದೆ.

### ಪ್ರಸಕ್ತಿ

ಕ್ರಿಯಾತ್ಮಕವಾಗಿ ಕಾರ್ಯವೆಸಗುವ ಅಧ್ಯಾಪಕರನ್ನು ಬೆಳೆಸುವುದಕ್ಕೆ ವಿದ್ಯಾಭ್ಯಾಸ ಮನೋವಿಜ್ಞಾನದಲ್ಲಿ ಮೂಲಭೂತವಾದ ತಿಳುವಳಿಕೆಯನ್ನು ಅಧ್ಯಾಪಕ ವಿದ್ಯಾರ್ಥಿಯು ಗಳಿಸಬೇಕಾಗಿದೆ. ಮಕ್ಕಳ ಬೆಳವಣಿಗೆ, ವಿಕಾಸ, ಕಲಿಕೆ, ವಿಜ್ಞಾನದ ಕಲಿಕೆ, ಕಲಿಕೆಯಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನ ಎಂಬಿವುಗಳಿಗೆ ಸಂಬಂಧಪಟ್ಟ ಅರ್ಥವತ್ತಾದ ಕಲಿಕೆಯನ್ನು ಅಧ್ಯಾಪಕ ವಿದ್ಯಾರ್ಥಿಯು ನಡೆಸಬೇಕಾಗಿದೆ. ಸಿದ್ಧಾಂತ ಮತ್ತು ಪ್ರಯೋಗವು ಒಟ್ಟಿಗೆ ಸಾಗಬೇಕು. ವಿದ್ಯಾಭ್ಯಾಸ ಮನೋವಿಜ್ಞಾನಕ್ಕೆ ಸಂಬಂಧಪಟ್ಟು ಲಭಿಸುವ ತಿಳುವಳಿಕೆಗಳನ್ನು ಕ್ಲಪ್ತಸಮಯದಲ್ಲಿ ಪ್ರಯೋಗ ಸಾಧ್ಯತೆಯಿಂದೊಡಗೂಡಿ ತಿಳಿಯುವುದಕ್ಕೆ ಯಥಾರ್ಥ ಶಾಲಾ ಅನುಭವಗಳೊಂದಿಗೆ ಹೊಂದಿಸಿಕೊಳ್ಳಬೇಕು. ಶಾಲಾ ಕಲಿಕಾನುಭವಗಳೊಡನೆ ಹೊಂದಿಸಿ ಹೋಗುವ ರೀತಿಯಲ್ಲಿ ಸಮಯಬಂಧಿತವಾಗಿ 2 ವರ್ಷಗಳಲ್ಲಿ ವಿವಿಧ ಯೂನಿಟುಗಳನ್ನು ಅನುಕ್ರಮವಾಗಿ ಹಂಚಿ ವಿನಿಮಯವನ್ನು ನಡೆಸಬೇಕಾಗಿದೆ. ಪ್ರಾಥಮಿಕ ವಿದ್ಯಾಲಯದ ಒಂದು ವಿದ್ಯಾರ್ಥಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಮನದಟ್ಟುಮಾಡಿಕೊಂಡು ಕಲಿಸುವ ವೈಜ್ಞಾನಿಕ ರೀತಿಯನ್ನು ಪ್ರತಿಯೊರ್ವ ಅಧ್ಯಾಪಕ ವಿದ್ಯಾರ್ಥಿಯೂ ಗಳಿಸಬೇಕಾಗಿದೆ. ಅದಕ್ಕಾಗಿ ವಿದ್ಯಾಭ್ಯಾಸ ಮನಃಶಾಸ್ತ್ರ ಪ್ರಯೋಗ ಮಟ್ಟದ ಕುರಿತಿರುವ ಆಂತರಿಕ ದೃಷ್ಟಿಕೋನವನ್ನು ಗಳಿಸಿರಬೇಕು. ಮಗುವಿನ ಆರೋಗ್ಯದ ಕುರಿತು ಹಾಗೂ ಆರೋಗ್ಯಕರ ನಡತೆಗಳಿಗೆ ಸಂಬಂಧಪಟ್ಟ ಸ್ಪಷ್ಟವಾದ ತಿಳುವಳಿಕೆಯನ್ನು ಗಳಿಸಬೇಕಾಗಿದೆ.

### ರೂಪ ರೇಖೆ ಮತ್ತು ವಿನಿಮಯ ರೀತಿ

ಪ್ರಾಥಮಿಕ ತರಗತಿಯಲ್ಲಿ ಉಂಟಾಗುವ ಸಮಸ್ಯೆಗಳನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ ತಕ್ಷಣ ಪರಿಹಾರ ಮತ್ತು ನಿರ್ದೇಶನಗಳನ್ನು ನೀಡಲು ಪ್ರಾಪ್ತವಾಗುವ ರೀತಿಯಲ್ಲಿರುವ ಅನುಭವಗಳು ಈ ಪೇಪರಿನ ಕಲಿಕೆಯ ಮೂಲಕ ಲಭಿಸಬೇಕು. ಅಂದರೆ ಪ್ರತಿ ಯೂನಿಟಿಗೆ ಸಂಬಂಧಪಟ್ಟು ಸಿದ್ಧಾಂತಪರ ದೃಷ್ಟಿಕೋನಗಳನ್ನು ಪ್ರಯೋಗತಲಕ್ಕೆ ತಲುಪಿಸುವ ಅನುಭವಗಳು ಲಭಿಸಬೇಕಾಗಿದೆ. ಈ ರೀತಿಯಲ್ಲಿ ಪ್ರತಿಯೊಂದು ಯೂನಿಟ್‌ಗೆ ಸಂಬಂಧಪಟ್ಟು ಕಾರ್ಯವೆಸಗಬೇಕಾದ ಮನೋವೈಜ್ಞಾನಿಕ ಪರವಾದ ಪ್ರಾಯೋಗಿಕ ತಂತ್ರಗಳನ್ನು ರೂಪಿಸುವುದಕ್ಕೂ ಅವುಗಳು ವೈಜ್ಞಾನಿಕ ರೀತಿಯಲ್ಲಿ ಕಾರ್ಯವೆಸಗಲಾಗುತ್ತದೆ ಎಂಬುದನ್ನು ದೃಢಪಡಿಸಬೇಕಾಗಿದೆ.

ಮನೋವಿಜ್ಞಾನ ಕಲಿಕೆಯನ್ನು ಉತ್ತಮ ರೀತಿಯಲ್ಲಿ ಕಾರ್ಯವೆಸಗುವುದಕ್ಕೆ ಮಾಹಿತಿ ತಂತ್ರಜ್ಞಾನದ ಉಪಯೋಗವನ್ನು ದೃಢಪಡಿಸಬೇಕು.

ನಿರಂತರವೂ ಸಮಗ್ರವೂ ಆದ ಕಲಿಕೆಯನ್ನು ದೃಢಪಡಿಸಲು ಸೆಮಿನಾರುಗಳು, ಸಿಂಪೋಸಿಯಂಗಳು, ಚರ್ಚೆಗಳು, ಪ್ರಯೋಗಗಳು, ನಿರೀಕ್ಷೆಗಳು, ಫೀಲ್ಡ್ ಟ್ರಿಪ್‌ಗಳು, ಕೇಸ್ ಸ್ಟಡಿ, ಪ್ರೋಜೆಕ್ಟ್‌ಗಳು, ಸಂಶೋಧನಾ ಚಟುವಟಿಕೆಗಳು ಮುಂತಾದ ಚಟುವಟಿಕೆಗಳನ್ನು ಬಳಸಿಕೊಳ್ಳಬೇಕು. ಅರ್ಥವತ್ತಾದ ಕಲಿಕೆಯನ್ನು ದೃಢಪಡಿಸಲು ಕಡ್ಡಾಯವಾಗಿ ಓದಿರಬೇಕಾದ ವಾಚನಾ ಸಾಮಾಗ್ರಿಗಳನ್ನೂ (Essential reading Materials) ಹೆಚ್ಚಿನ ಓದುವಿಕೆಗಿರುವ ವಾಚನಾ ಸಮಾಗ್ರಿಗಳನ್ನು (Suggestive Reading Materials) ನಿರ್ದೇಶಿಸಬಹುದು. ಪ್ರತಿಯೊಂದು ಮಗುವು ವಿವೇಚನಾತ್ಮಕ ಜೆರ್ನಲ್‌ಗಳನ್ನು (Reflexive journals) ತಯಾರಿಸುವ ಮಟ್ಟಕ್ಕೆ ಏರಬೇಕಾಗಿದೆ.

### ಉದ್ದೇಶಗಳು

ಕಲಿಕೆಯ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತೃಪ್ತಿಕರವಾದ ರೀತಿಯಲ್ಲಿ ಕಲಿಸಲು ಕೆಳಗೆ ಕೊಟ್ಟಿರುವ ಉದ್ದೇಶಗಳನ್ನು ಗಳಿಸಬೇಕಾಗಿದೆ.

- ಮಗುವನ್ನು ತಿಳಿಯುವುದು ಎಂಬುವುದು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆಯುತ್ತದೆ. ಮಗುವಿನ ಜೀವಶಾಸ್ತ್ರ, ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಪ್ರತ್ಯೇಕತೆಗಳನ್ನು ಗುರುತಿಸುವುದಕ್ಕೆ ಶಾಲಾ ಸಂದರ್ಶನ, ಗೃಹ ಸಂದರ್ಶನ (ಪ್ರತ್ಯೇಕವಾದ ಪರಿಗಣನೆ ಬೇಕಾದ ಮಕ್ಕಳು) ನಿರೀಕ್ಷಣೆ, ಕೇಸ್ ಸ್ಟಡಿ ಮುಂತಾದ ಮಾರ್ಗಗಳನ್ನು ಅವಲಂಬಿಸಿ ತಿಳುವಳಿಕೆಯನ್ನು ಗಳಿಸಲು.

- ಶಿಶು ವಿಕಾಸ ಮತ್ತು ವಿಕಾಸದ ಕುಂಠಿತವನ್ನು ತಿಳಿಯಲು.
- ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ದೃಷ್ಟಿಕೋನಗಳು ವಿಕಾಸದ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿಯಲು.
- ಕಲಿಕೆ, ಕಲಿಕೆಗೆ ಸಂಬಂಧಪಟ್ಟ ಮನೋವೈಜ್ಞಾನಿಕವಾದ ವಿವಿಧ ಸಮೀಪನಗಳನ್ನು ಚರ್ಚೆಯ ಮೂಲಕವೂ (ವಿವಿಧ ಚರ್ಚಾ ರೀತಿಗಳು) ರೆಫರೆನ್ಸ್‌ನ ಮೂಲಕವೂ ಕಂಡುಹಿಡಿದು ತಿಳುವಳಿಕೆಯನ್ನು ಗಳಿಸಲು.
- ಕಲಿಕೆಯ ಮೇಲೆ ಪ್ರಭಾವ ಬೀರುವ ವಿವಿಧ ಘಟಕಗಳು ಯಾವುದು ಎಂಬುದನ್ನು ತಿಳಿಯಲು.
- ಬುದ್ಧಿ, ಬುದ್ಧಿ ವಿಕಾಸ ಎಂಬಿವುಗಳ ಕುರಿತಾದ ವ್ಯತ್ಯಸ್ತ ದೃಷ್ಟಿಕೋನವನ್ನು ಕಂಡುಹಿಡಿಯಲು.
- ಮಕ್ಕಳ ವ್ಯಕ್ತಿತ್ವ ವಿಕಾಸ, ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವ ಘಟಕಗಳು ಎಂಬಿವುಗಳ ಕುರಿತಿರುವ ತಿಳುವಳಿಕೆಯನ್ನು ಕಂಡುಹಿಡಿಯಲು.
- ಉತ್ತಮ ಕಲಿಕೆಗಾಗಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯು ಯಾವ ರೀತಿಯಲ್ಲಿದೆ ಎಂದು ಗುರುತಿಸಲು.
- ಕೌನ್ಸೆಲಿಂಗ್ – ವಿವಿಧ ದೃಷ್ಟಿಕೋನಗಳು, ತಂತ್ರಗಳು ಎಂಬಿವುಗಳಲ್ಲಿ ತಿಳುವಳಿಕೆಯನ್ನು ಗಳಿಸಲು / ಪ್ರಾಯೋಗಿಕ ಅನುಭವಗಳ ಮೂಲಕ ನೈಪುಣ್ಯವನ್ನು ಗಳಿಸಲು.

| ಪೇಪರಿನ ಸಂಖ್ಯೆ | ಪೇಪರಿನ ಹೆಸರು |
|---|---|
| $S_1.P_1$ | **ಶಿಶು ವಿಕಾಸ ಮತ್ತು ಕಲಿಕೆ (Child Development and Learning)** |

| | |
|---|---|
| ಒಟ್ಟು ಅಂಕಗಳು | : 80 (ನಿರಂತರ ಮೌಲ್ಯಮಾಪನದಲ್ಲಿ CE 20 + ಅಂತಿಮ ಪರೀಕ್ಷೆಯ TE 60) |
| ಸೆಮಿಸ್ಟರಿನ ಒಟ್ಟು ಸಮಯ | : 90 ಗಂಟೆಗಳು |
| ಒಂದು ವಾರದ ಸಮಯ | : 5 ಗಂಟೆಗಳು |

## ವಿಷಯಗಳು

### ಯೂನಿಟು 1 : ವಿದ್ಯಾಭ್ಯಾಸ ಮನೋವಿಜ್ಞಾನ – ಒಂದು ವಿಜ್ಞಾನ ಶಾಖೆ

**(ಸಮಯ : 20 ಗಂಟೆಗಳು)**

- ಮನೋವಿಜ್ಞಾನ – ನಿರ್ವಚನೆಗಳು
- ವಿವಿಧ ಮನೋವಿಜ್ಞಾನ ಶಾಖೆಗಳು
  - ಕೇವಲ ಮನೋವಿಜ್ಞಾನ ಶಾಖೆಗಳು
  - ಪ್ರಯುಕ್ತ ಮನೋವಿಜ್ಞಾನ ಶಾಖೆಗಳು
- ವಿದ್ಯಾಭ್ಯಾಸ ಮನೋವಿಜ್ಞಾನ ಒಂದು ಪ್ರಯುಕ್ತ ಮನೋವಿಜ್ಞಾನ ಎಂಬ ರೀತಿಯಲ್ಲಿ
- ವಿದ್ಯಾಭ್ಯಾಸ ಮನೋವಿಜ್ಞಾನ ಪ್ರಸಕ್ತಿ, ಪ್ರಾಧಾನ್ಯತೆ, ಕೊರತೆಗಳು
- ಮನೋವಿಜ್ಞಾನ ಕಲಿಕಾ ರೀತಿಗಳು
  - ನಿರೀಕ್ಷಣೆ, ಸಂದರ್ಶನ
  - ಪ್ರಯೋಗ ರೀತಿ
  - ಏಕ ವ್ಯಕ್ತಿ ಕಲಿಕೆ (Case Study)
  - ಉಪಾಖ್ಯಾನ ರೀತಿ (Anecdotal Method)
  - ಸಂಕುಚಿತ ರೇಖಾ ಕಲಿಕೆ (Cumulative record study)
  - ಮಕ್ಕಳ ವಿವೇಚನಾತ್ಮಕ ಜರ್ನಲ್ (Reflexive journal)
- ಮನೋವಿಜ್ಞಾನ ಸಂಶೋಧನಾ ತಂತ್ರಗಳು
  - ಪ್ರಶ್ನಾವಳಿ
  - ಚೆಕ್‌ಲಿಸ್ಟ್
  - ರೇಟಿಂಗ್ ಸ್ಕೇಲ್
  - ಪಟ್ಟಿಗಳು (Schedules)
  - ಮನಃಶಾಸ್ತ್ರ ಶೋಧಕ
  - ಉಪಖ್ಯಾನ ರೇಖೆ
  - ಸಂಕುಚಿತ ರೇಖೆ
  - ಸಾಮಾಜಿಕ ಲೇಖನ ರೀತಿ (Sociogram)

## ಯೂನಿಟು 2 : ಶಿಶುವಿಕಾಸ (ಸಮಯ : 35 ಗಂಟೆಗಳು)

### ಶಿಶುವಿಕಾಸ ಮತ್ತು ಕಲಿಕೆ

- ಬೆಳವಣಿಗೆ, ವಿಕಾಸ – ಪ್ರಾಥಮಿಕ ತಿಳುವಳಿಕೆಗಳು
- ವಿಕಾಸದ ಹಂತಗಳು
- ಶಿಶುವಿಕಾಸ ತತ್ವಗಳು
- ಶಿಶುವಿಕಾಸದ ಮೇಲೆ ಪ್ರಭಾವ ಬೀರುವ ಘಟಕಗಳು
- ವಿಕಾಸದ ಅವಶ್ಯಕತೆಗಳು (Havighurst)
- ವಿಕಾಸ ಮಂಡಲಗಳು
  - ವೈಜ್ಞಾನಿಕ ವಿಕಾಸ (ಪಿಯಾಷೆ)
  - ಸಾಮಾಜಿಕ ವಿಕಾಸ (ಎರಿಕ್ಸನ್, ಬಂದೂರ)
  - ಮನೋಭಾವದ ವಿಕಾಸ (ಕೆ.ಎಂ. ಬ್ರಾಡ್ಜಸ್)
  - ನೈತಿಕ ವಿಕಾಸ (ಕೋಲ್‌ಬರ್ಗ್)
  - ಚಲನಾತ್ಮಕ ವಿಕಾಸ
- ಆಟಗಳು – ಕರ್ತವ್ಯಗಳು, ಪ್ರತ್ಯೇಕತೆಗಳು
- ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸ್ಥಿತಿಗತಿಗಳು ಕ್ರೀಡೆಗಳಲ್ಲಿ ಬೀರುವ ಪ್ರಭಾವಗಳು
- ವಿವಿಧ ವಿಕಾಸ ಮಂಡಲಗಳಲ್ಲಿ ಕ್ರೀಡೆಗಳು ಬೀರುವ ಪ್ರಭಾವ (ಭಾಷಾ ವಿಕಾಸಗಳು ಸೇರಿ)
- ಜೀವನ ವಿಕಾಸ (Life span development) - ಮೂಲ ವಿಷಯಗಳು

## ಯೂನಿಟು 3: ಕಲಿಕೆ (ಸಮಯ : 35 ಗಂಟೆಗಳು)

- ಕಲಿಕೆ – ಸಾಮಾನ್ಯ ತಿಳುವಳಿಕೆಗಳು
- ಕಲಿಕೆಗೆ ಸಂಬಂಧಪಟ್ಟ ವ್ಯತ್ಯಸ್ತ ಸಮೀಪನೆಗಳು (behavioural, social cognitive, information processing, cognitive constructivist, social constructivist)
  - ಸಂಬಂಧವಾದ (connectionism) (ಥೋನ್‌ಡೈಕ) ಅಥವಾ ಪರಿಶ್ರಮ ಪರಾಜಯ ಸಿದ್ಧಾಂತ
  - ಅನುಬಂಧ (ಪಾವ್‌ಲೋವ್, ಸ್ಕಿನ್ನರ್, ವಾಟ್ಸನ್)
- ವ್ಯವಹಾರವಾದದ ಕುರಿತಿರುವ ವಿಮರ್ಶನಾತ್ಮಕ ಮೌಲ್ಯಮಾಪನಗಳು, ಅಧ್ಯಯನ. ಕಲಿಕಾ ಪ್ರಕ್ರಿಯೆ ಎಂಬಿವುಗಳ ಪ್ರತ್ಯೇಕ ವೀಕ್ಷಣೆಗಳು
- ಸಮಗ್ರವಾದ (ಗಸ್ಟಾಲ್ಡ್ ಸೈಕೋಲಜಿ) – ಮಾಕ್ಸ್‌ವೆರ್ ತೀಮರ್, ಕೋಫ್‌ಕ.
- ಆತ್ಮಾವಲೋಕನ ಕಲಿಕೆ (ಕೊಹ್‌ಲರ್)
- ಸಮಗ್ರವಾದ ವಿದ್ಯಾಭ್ಯಾಸದ ಪ್ರಸಕ್ತಿ
- ಜ್ಞಾನ ನಿರ್ಮಾಣವಾದ (ಪಿಯಾಷೆ) ಸ್ವಾಯತ್ತಗೊಳಿಸುವುದು – ಅರಗಿಸಿಕೊಳ್ಳುವುದು – ಸ್ಕೀಮ
- ಜೆರೋಂ ಎಸ್. ಬ್ರೂಣರ್ ಮತ್ತು ಜ್ಞಾನ ನಿರ್ಮಾಣವಾದ
  - ಕಂಡುಕೊಳ್ಳುವ ಕಲಿಕೆ (Discovery Learning)
  - ಚಾಕ್ರಿಕಾರೋಹಣ ರೀತಿ (Spiralling)
  - ಆಶಯ ರೂಪೀಕರಣ ಹಂತಗಳು
  - ಆಶಯದಾನ ಮಾದರಿ
  - ಕಲಿಕೆ ಒಂದು ಸಾಮಾಜಿಕ ಪ್ರಕ್ರಿಯೆ
- ಸಾಮಾಜಿಕ ಜ್ಞಾನ ನಿರ್ಮಾಣವಾದ (ವೈಗೋಟ್‌ಸ್ಕಿ, ಬ್ರೂಣರ್)
  - ಕಲಿಕೆಯು ಒಂದು ಸಾಮಾಜಿಕ ಸಾಂಸ್ಕೃತಿಕ ಪ್ರಕ್ರಿಯೆ
  - Zone of Proximal Development (ZPD)
  - ಸ್ಕಫೋಲ್‌ಡಿಂಗ್ (Scaffolding)
  - Reciprocal teaching ವಿಮರ್ಶನಾ ಕಲಿಕೆ
  - ಸಹಕಾರಾತ್ಮಕ ಕಲಿಕೆಯೂ ಸಹವರ್ತಿತ ಕಲಿಕೆಯೂ
  - ಸಂವಾದಾತ್ಮಕ ಕಲಿಕೆ
  - ತರಗತಿ ಕೋಣೆಯ ಪ್ರಾಧಾನ್ಯತೆ

- ಮಾನವೀಯತೆಯ ವಾದ – ಕಾಲ್‌ರೋಜೇರ್ಸ್ – ಕಲಿಕಾ ತತ್ವಗಳು
- ಕಲಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು
  - ಅಭಿ ಪ್ರೇರಣೆ
  - ಪರಿಪಕ್ವತೆ
  - ಗಮನ
  - ಮನೋಭಾವ
  - ಬುದ್ಧಿ
  - ಉದ್ವೇಗ
  - ಕಲಿಕಾ ಶೈಲಿ
  - ಕಲಿಕಾ ವೇಗ
  - ಕುಟುಂಬ ಹಾಗೂ ಸಾಮಾಜಿಕ ಘಟಕಗಳು
  - ಕಲಿಕಾ ವಾತಾವರಣ
  - ಶಾರೀರಿಕವೂ ಮಾನಸಿಕವೂ ಆರೋಗ್ಯಕರವೂ ಆದ ನ್ಯೂನತೆಗಳು ಮುಂತಾದವುಗಳು
- ತರಗತಿ ಕೋಣೆಯ ಪ್ರಾಧಾನ್ಯತೆ

## ವಿನಿಮಯ ರೀತಿ

ಸೆಮೆಸ್ಟರ್ 1ರ ಯೂನಿಟ್‌ಗಳನ್ನು ಕೆಳಗೆ ಕೊಟ್ಟಿರುವ ಕಲಿಕಾ ತಂತ್ರಗಳನ್ನುಪಯೋಗಿಸಿ ವಿನಿಮಯ ಮಾಡಬೇಕಾಗಿರುವುದು.

- ನಿರೀಕ್ಷಣೆಗಳು
- ಅನುಭವದ ವಿಶ್ಲೇಷಣೆ
- ಸಂದರ್ಶನ
- ಪ್ರಾಕ್ಟಿಕಲ್ (ಪ್ರಯೋಗ)
- ಸೆಮಿನಾರು
- ಪೇನಲ್ ಚರ್ಚೆ
- ಗುಂಪು ಚರ್ಚೆ
- ಸಂವಾದ
- ಅಸೈನ್‌ಮೆಂಟ್
- ಕೇಸ್ ಸ್ಟಡಿ
- ಸಂಶೋಧನಾ ಚಟುವಟಿಕೆಗಳು
- ಐ.ಸಿ.ಟಿ.ಯ ಉಪಯೋಗ
- ವರ್ಕ್‌ಶೋಪುಗಳು (ಕಾರ್ಯಾಗಾರ)
- ವಿಶ್ಲೇಷಣೆಯ ವರದಿ
- ಫೀಲ್ಡ್ ಟ್ರಿಪ್ (ಬಯಲು ಪ್ರವಾಸ)
- ಪ್ರೋಜೆಕ್ಟ್
- ಸರ್ವೆ

## ಮೌಲ್ಯಮಾಪನ

ಸೆಮೆಸ್ಟರ್ 1ರ "ಶಿಶುವಿಕಾಸ ಮತ್ತು ಕಲಿಕೆ" ಎಂಬ ಪೇಪರಿನಲ್ಲಿ ಎರಡು ವಿಧದ ಮೌಲ್ಯಮಾಪನಗಳು ಇರುವುದು.

1. ಅಂತಿಮ ಪರೀಕ್ಷೆ 60 ಅಂಕಗಳು
2. ನಿರಂತರ ಮೌಲ್ಯಮಾಪನ (ಪ್ರಾಕ್ಟಿಕಲ್ ಸೇರಿ) 20 ಅಂಕಗಳು

## 1. ಅಂತಿಮ ಪರೀಕ್ಷೆ

ಕಲಿತಿರುವ ಮನೋವೈಜ್ಞಾನಿಕ ತತ್ವಗಳು ಹಾಗೂ ಆಶಯಗಳು ತರಗತಿ ಕೋಣೆಯಲ್ಲಿ ಪ್ರಯೋಗಿಸಲ್ಪಡುವಂತದ್ದೂ ವಿದ್ಯಾಭ್ಯಾಸದ ಪ್ರಾಧಾನ್ಯತೆಯನ್ನು ವಿಶದೀಕರಿಸಲ್ಪಡುವಂತದ್ದೂ ಆಗಿರುವ ಪ್ರಶ್ನೆಗಳನ್ನು ಅಂತಿಮ ಪರೀಕ್ಷೆಯಲ್ಲಿ ಅಳವಡಿಸಬೇಕು.

## 2. ನಿರಂತರ ಮೌಲ್ಯಮಾಪನ

ಪಠ್ಯ ಪದ್ಧತಿಯನ್ನು ತರಗತಿಯಲ್ಲಿ ವಿನಿಮಯ ಮಾಡುವಾಗ ನೀಡುವ ವ್ಯಕ್ತಿಗತ ಚಟುವಟಿಕೆಗಳೂ ಗುಂಪು ಚಟುವಟಿಕೆಗಳನ್ನೂ ಆಯಾ ಸಮಯದಲ್ಲಿ ನಿರಂತರ ಮೌಲ್ಯಮಾಪನ ಮಾಡುವುದರ ಹೊರತಾಗಿ ಮಕ್ಕಳ ಸ್ವ ಮೌಲ್ಯಮಾಪನ ಹಾಗೂ ಪರಸ್ಪರ ಮೌಲ್ಯಮಾಪನ ನಡೆಸಬಹುದಾಗಿದೆ. ಗುಂಪು ಮಾಲ್ಯಮಾಪನವನ್ನೂ ನಡೆಸಬಹುದಾಗಿದೆ. ಯೋಗ್ಯವಾದುವುಗಳಿಗೆ ಯಥಾಸಮಯ ಗರಿಷ್ಠ 20 @MÚÚ¶ÚÚ ¬Ht ÑÚÙÑÚ¾ÚÚ« ÚÚ OÚs ÚÕt ¥Ú ÑèÚ@ÑÚ« ÚCE ಅಂಕಗಳಾಗಿ ಪರಿವರ್ತಿಸಬಹುದು.

## $S_1.P_1$ ಶಿಶುವಿಕಾಸ ಮತ್ತು ಕಲಿಕೆ : ಯೂನಿಟಿನ ವಿವರಣೆಗಳು

| ವಿಷಯ | ವಿನಿಮಯ ರೀತಿಗಳು |
|---|---|
| **ಯೂನಿಟು 1 : ವಿದ್ಯಾಭ್ಯಾಸ ಮನೋವಿಜ್ಞಾನ ಒಂದು ವಿಜ್ಞಾನ ಶಾಖೆ (ಸಮಯ: 20 ಗಂಟೆಗಳು)**<br>**ವಿದ್ಯಾಭ್ಯಾಸ ಮನೋವಿಜ್ಞಾನ ಒಂದು ವಿಜ್ಞಾನ ಶಾಖೆ**<br>1.1 ಮನೋವಿಜ್ಞಾನ ಎಂದರೇನು?<br>• ವ್ಯಾಖ್ಯಾನಗಳು (ಹಿಂದಿನ ವ್ಯಾಖ್ಯಾನಗಳು – ವಿಲ್ಯಂಹೂಂಟ್, ವಿಲಿಯಂ ಜೇಮ್ಸ್, ಆಧುನಿಕ ವ್ಯಾಖ್ಯಾನಗಳು – ಪಿಯಾಷೆ, ವೈಗೋಟ್ಸ್ಕಿ) | • ವ್ಯಾಖ್ಯಾನದ ಪ್ರಧಾನ ಆಶಯಗಳ (ಸ್ವಭಾವ, ಮಾನಸಿಕ ಪ್ರಕ್ರಿಯೆಗಳು, ವೈಜ್ಞಾನಿಕ ಕಲಿಕೆ) ಆಧಾರದಲ್ಲಿ ಮನಃಶಾಸ್ತ್ರದ ಸ್ವಭಾವ ಮತ್ತು ರೀತಿಯನ್ನು ಕಂಡುಹಿಡಿಯುವುದು.<br>▲ ವಿಜ್ಞಾನದ ರೀತಿ ಪದ್ಧತಿಯನ್ನು ಮನೋವಿಜ್ಞಾನದಲ್ಲಿ ಅಳವಡಿಸಿರುವುದು ಹೇಗೆ?<br>▲ ಮನುಷ್ಯ ಸ್ವಭಾವವನ್ನು ನಿಯಂತ್ರಿಸುವ ಘಟಕಗಳು ಯಾವುವು? ಅವುಗಳನ್ನು ಎಷ್ಟರ ಮಟ್ಟಿಗೆ ಕಲಿಕೆಗೆ ಮತ್ತು ನಿರೀಕ್ಷಣೆಗೆ ಒಳಪಡಿಸಬಹುದು? |
| 1.2 ವಿಭಿನ್ನ ಮನೋವಿಜ್ಞಾನ ಶಾಖೆಗಳು<br>• ಕೇವಲ ಮನೋವಿಜ್ಞಾನ ಶಾಖೆಗಳು (ಜನರಲ್ ಸೈಕೋಲಜಿ, ಫಿಸಿಯೋಲಜಿಕಲ್ ಮನೋವಿಜ್ಞಾನ, ಪ್ರಯೋಗ ಮನೋವಿಜ್ಞಾನ, ನಾಡಿ ಮನೋವಿಜ್ಞಾನ) ಪ್ರಯುಕ್ತ ಮನೋವಿಜ್ಞಾನ ಶಾಖೆಗಳು (ವಿದ್ಯಾಭ್ಯಾಸ ಮನಃಶಾಸ್ತ್ರ, ಕ್ಲಿನಿಕಲ್ ಮನೋವಿಜ್ಞಾನ .....)<br>• ವಿದ್ಯಾಭ್ಯಾಸ ಮನೋವಿಜ್ಞಾನ – ಪ್ರಯುಕ್ತ ಮನಃಶಾಸ್ತ್ರ ಎಂಬ ನೆಲೆಯಲ್ಲಿ<br>1.3 ವಿದ್ಯಾಭ್ಯಾಸ ಮನೋವಿಜ್ಞಾನ (ವ್ಯಾಖ್ಯಾನಗಳು ಪ್ರಸಕ್ತಿ, ಪ್ರಾಧಾನ್ಯತೆ, ಪರಿಮಿತಿಗಳು) | ■ ವಿಭಿನ್ನ ಮನೋವಿಜ್ಞಾನ ಶಾಖೆಗಳಿಂದ ಲಭಿಸುವ ಮಾಹಿತಿಗಳು, ದೃಷ್ಟಿಕೋನಗಳು ಯಾವೆಲ್ಲಾ ಸಂದರ್ಭಗಳಲ್ಲಿ ಯಾವ ರೀತಿಯಲ್ಲಿ ಉಪಯೋಗಿಸಬಹುದು ಎಂದು ಕಂಡುಕೊಳ್ಳುವರು.<br>■ ತರಗತಿಕೋಣೆಯ ಕೆಲವು ಸಮಸ್ಯೆಗಳು / ಪ್ರಯೋಗ ರೀತಿಗಳು ಎಂಬಿವುಗಳಿಗೆ ಸಾಮಾನ್ಯ ಜ್ಞಾನಾಧಿಷ್ಟಿತವಾದ ಉತ್ತರಗಳನ್ನು ಚರ್ಚಿಸಿ ಕ್ರೋಡೀಕರಿಸುವರು. ಮನೋವಿಜ್ಞಾನ ಸಂಶೋಧನಾ ಫಲಗಳ ಆಧಾರದಲ್ಲಿರುವ ಉತ್ತರಗಳೊಂದಿಗೆ ತುಲನೆ ಮಾಡುವರು. ಉದಾ:– ಕಡಿಮೆ ಗುಣಮಟ್ಟದ ವಿದ್ಯಾರ್ಥಿಯನ್ನು ಯಾವಾಗಲೆಲ್ಲಾ ಸಹಾಯಮಾಡಬೇಕು?<br>■ ಕಲಿಕೆ, ಬೋಧನೆ, ವಿದ್ಯಾರ್ಥಿಗಳೊಂದಿಗಿನ ವಿನಿಮಯಗಳು, ಕ್ಲಾಸ್ ಮೇನೇಜ್‌ಮೆಂಟ್ ಮುಂತಾದ ಮಂಡಲಗಳಲ್ಲಿ ವಿದ್ಯಾಭ್ಯಾಸ ಮನೋವಿಜ್ಞಾನದ ದೃಷ್ಟಿಕೋನಗಳನ್ನು ಹೇಗೆ ಉಪಯೋಗಿಸಬಹುದೆಂದು ತಿಳಿಯುವರು.<br>■ ಕೆಲವು ಪ್ರಧಾನ ಮಂಡಲದ ಸಮೀಪನಗಳಿಗೂ ಪ್ರಾಯೋಗಿಕ ಪದ್ಧತಿಗಳಿಗೂ ವಿದ್ಯಾಭ್ಯಾಸ ಮನೋವಿಜ್ಞಾನವನ್ನು ಹೇಗೆ ಉಪಯೋಗಿಸಬಹುದು ಎಂಬುದನ್ನು ನಿರ್ದಿಷ್ಟ ಸಂದರ್ಭಗಳು/ ಸಮಸ್ಯೆಗಳನ್ನು ಆಧಾರವಾಗಿರಿಸಿ ವಿವರಿಸುವುದು/ ಚರ್ಚೆಮಾಡುವುದು.<br>ಉದಾ: ಉತ್ತಮ ರೀತಿಯ ಬೋಧನೆ, ಕಲಿಕಾ ಬೋಧನಾ ಸಾಮಾಗ್ರಿಗಳ ನಿರ್ಮಾಣ, ವಿದ್ಯಾರ್ಥಿಗಳೊಡನೆ ಇರುವ ಆರೋಗ್ಯಕರವಾದ ಭಾಗವಹಿಸುವಿಕೆ, ಅನಪೇಕ್ಷಿತ ವರ್ತನೆಯನ್ನು ನಿಯಂತ್ರಿಸುವುದು / ಶಿಕ್ಷೆ ಅಭಿಪ್ರೇರಣೆಯನ್ನು ಬೆಳೆಸುವುದು. |
| 1.4 ಮನೋವಿಜ್ಞಾನ ಕಲಿಕಾ ರೀತಿಗಳು<br>• ನಿರೀಕ್ಷಣೆ, ಸಂದರ್ಶನ, ಪ್ರಯೋಗ ರೀತಿ, ಏಕವ್ಯಕ್ತಿ ಕಲಿಕೆ, ಆಖ್ಯಾನ ರೀತಿ, ಸಂಚಿತ ರೇಖಾ ಕಲಿಕೆ, ಮಕ್ಕಳ ವಿಚಿಂತನಾತ್ಮಕ ಜರ್ನಲ್ (Reflective journal) | |
| 1.5 ಮನೋವಿಜ್ಞಾನ ಸಂಶೋಧನಾ ಉಪಾದಿಗಳು<br>• (ಪ್ರಶ್ನಾವಳಿ, ಚೆಕ್‌ಲಿಸ್ಟ್, ರೇಟಿಂಗ್ ಸ್ಕೇಲ್, ಪಟ್ಟಿಗಳು(Schedules) ಶೋಧಕ, ಉಪ ಆಖ್ಯಾನ ರೇಖೆ, ಸಂಚಿತ ರೇಖೆ, ಸೋಶಿಯೋ ಗ್ರಾಮ್ (Sociogram). | • ಆಯ್ಕೆ ಮಾಡಿದ ಮನೋವಿಜ್ಞಾನ ಕಲಿಕಾ ರೀತಿಗಳ ಪ್ರಯೋಗ.<br>■ ನಿರ್ದಿಷ್ಟ ಮಂಡಲಗಳ ಪ್ರಶ್ನಾವಳಿಗಳು, ಚೆಕ್‌ಲಿಸ್ಟ್‌ಗಳು ಎಂಬಿವುಗಳ ತಯಾರಿ.<br>■ ಆಯ್ಕೆಮಾಡಿದ ಅಳತೆಯ ಮಾನದ ಉಪಾದಿಗಳನ್ನು (standardised tools) ಉಪಯೋಗಿಸಿ ಮಾಹಿತಿ ಸಂಗ್ರಹಿಸುವುದು, ಲಭಿಸಿದ ಮಾಹಿತಿಗಳನ್ನು ವಿಶ್ಲೇಷಣೆ ಮಾಡುವುದು. |

| ವಿಷಯ | ವಿನಿಮಯ ರೀತಿಗಳು |
|---|---|
| **ಯೂನಿಟ್ – 2 ಶಿಶುವಿಕಾಸ (ಸಮಯ : 35 ಘಂಟೆಗಳು)**<br>**ಶಿಶುವಿಕಾಸ ಮತ್ತು ಕಲಿಕೆ**<br>2.1 ಬೆಳವಣಿಗೆ, ವಿಕಾಸ – ಪ್ರಾಥಮಿಕ ತಿಳುವಳಿಕೆಗಳು<br>• ಬೆಳವಣಿಗೆ : (ನಿರೀಕ್ಷಣೆಗೆ ಒಳಪಡಿಸಬಹುದಾದ, ಅಳತೆ ಮಾಡಿ ಮನದಟ್ಟಾಗುವ ಶಾರೀರಿಕ ವ್ಯತಿಯಾನಗಳು/ಬದಲಾವಣೆ; ರಚನಾಪರವೂ ಪರಿಣಾಮಾತ್ಮಕವೂ ಆದ ಬದಲಾವಣೆ/ ವಿಕಾಸ : (ಮುಂದುವರಿದ ಪ್ರಕ್ರಿಯೆಯ ಗುಣಾತ್ಮಕವಾದ ಬದಲಾವಣೆ – ರಚನಾಪರವೂ ಕರ್ತವ್ಯ ಪರವೂ ಆಗಿರುವುದು)<br>2.2 ವಿಕಾಸ ಹಂತಗಳು (ಜನನ ಪೂರ್ವ ಹಂತ (pre-natal period conception to birth) ಜನನಾಂತರ ಹಂತ (post-natal period) ಶೈಶವ, ಬಾಲ್ಯ, ಯೌವನ, ಪ್ರೌಢಾವಸ್ಥೆ ಬೆಳವಣಿಗೆ ಮತ್ತು ವಿಕಾಸಗಳೊಳಗಿನ ಸಂಬಂಧ, ಬೆಳವಣಿಗೆಯ ಪ್ರಮಾಣದಲ್ಲಿ ವ್ಯಕ್ತಿ ವ್ಯತ್ಯಾಸಗಳು.<br>2.3 ವಿಕಾಸ ತತ್ವಗಳು<br>• ವಿಕಾಸವು ಒಂದು ನಿರಂತರ ಪ್ರಕ್ರಿಯೆಯಾಗಿದೆ – ವಿಕಾಸವೂ ಕ್ರಮಾನುಗತವಾಗಿದೆ– ವಿಕಾಸದ ಗತಿ ವೇಗದಲ್ಲಿ ವ್ಯಕ್ತಿಗತ ವೈವಿಧ್ಯವು ಕಂಡುಬರುವುದು– ವಿಕಾಸದ ಗತಿವೇಗವು ಪ್ರವಚನೀಯವಾಗಿದೆ. – ವ್ಯಕ್ತಿತ್ವ ವಿಕಾಸ ಮಂಡಲಗಳೊಳಗೆ ಪರಸ್ಪರ ಸಂಬಂಧವಿದೆ – ವಿಕಾಸವು ಕಲಿಕೆಯ ಮತ್ತು ಪಕ್ವತೆಯ ಫಲವಾಗಿದೆ. ಪ್ರತಿಯೊಂದು ವಿಕಾಸ ಹಂತದಲ್ಲೂ ಪ್ರಕ್ಷಿತ ಅಭಿವೃದ್ಧಿಯ ವಿಷಯ (Development Tasks) ಗಳಿವೆ – ಹಾವಿಗೆಸ್ಟಿನ ಕಂಡುಹಿಡಿಯುವಿಕೆ.<br>2.4 ಶಿಶುವಿಕಾಸದಲ್ಲಿ ಪ್ರಭಾವ ಬೀರುವ ಘಟಕಗಳು<br>(ವಂಶ ಪಾರಂಪರ್ಯ (heredity), ಪರಿಸರ (environment), ಪಕ್ವತೆ (maturation), ಕಲಿಕೆ (learning)<br>2.5 ವಿಕಾಸದ ಅವಶ್ಯಕತೆಗಳು (Havighurst) | • ವಿದ್ಯಾಭ್ಯಾಸವು ವಿಕಾಸದ ಹಂತಗಳಿಗೂ ರಚನೆಗಳಿಗೂ ಅನುಗುಣವಾಗಿರಬೇಕು ಎಂಬ ಆಶಯವನ್ನು ರೂಪೀಕರಿಸುವುದು.<br>• ಪ್ರತಿಯೋರ್ವ ವಿದ್ಯಾರ್ಥಿಯ ವಿಕಾಸವೂ ಕೆಲವು ವಿಷಯಗಳಲ್ಲಿ ಉಳಿದೆಲ್ಲ ವಿದ್ಯಾರ್ಥಿಗಳ ರೀತಿಯಲ್ಲಾಗಿದೆ. ಕೆಲವು ವಿಷಯಗಳಲ್ಲಿ ಇನ್ನಿತರ ವಿದ್ಯಾರ್ಥಿಗಳ ರೀತಿಯಲ್ಲಾಗಿರುವುದಿಲ್ಲ.<br>▶ ಅನುವಂಶೀಯ (ಆಂತರಿಕ) ಘಟಕಗಳೂ ಪರಿಸರಜನ್ಯವಾದ ಬಾಹ್ಯ ಘಟಕಗಳು ವಿಕಾಸದ ಮೇಲೆ ಹೇಗೆ ಪ್ರಭಾವ ಬೀರುತ್ತದೆ?<br>▶ ವ್ಯತ್ಯಸ್ತ ವಿಕಾಸದ ಹಂತಗಳಲ್ಲಿರುವ ಮಕ್ಕಳ ಅವಶ್ಯಕತೆಗಳು (ಸಾಮಾಜಿಕ, ಭೌತಿಕ) ಯಾವುದಾಗಿರುವುದು?<br>■ ವಿವಿಧ ಮಟ್ಟದಲ್ಲಿರುವ ಶಾಲಾ ಪಠ್ಯಪದ್ಧತಿ/ ಕಲಿಕಾ ಸಾಮಾಗ್ರಿಗಳು ಎಂಬಿವುಗಳಲ್ಲಿ ವಿಕಾಸದ ಹಂತಗಳು ಯಾವ ರೀತಿಯಲ್ಲಿ ಪ್ರತಿಫಲಿಸುವುದೆಂದು ವಿಶ್ಲೇಷಣೆ ಕೈಗೊಳ್ಳುವುದು.<br>■ ವಿವಿಧ ವಿಷಯಗಳಲ್ಲಿನ ಆಯ್ಕೆ ಮಾಡಿದ ಆಶಯ ಮಂಡಲಗಳನ್ನು ವಿವಿಧ ವಿಕಾಸದ ಹಂತಗಳ ವಿದ್ಯಾರ್ಥಿಗಳಿಗಾಗಿ ಹೇಗೆ ತಯಾರಿಸಬಹುದು ಎಂದು ಮಂಡಿಸುವುದು.<br>■ ವಿವಿಧ ದೇಶಗಳ ವಿಕಾಸ ಮಾನದಂಡದ ಅಳತೆಗಳನ್ನು ತುಲನೆ ಮಾಡುವುದು.<br>■ ಭೌತಿಕ ವ್ಯತ್ಯಾಸಗಳನ್ನು ಗಣನೆಗೆ ತೆಗೆದು ತರಗತಿಯ ಪೀಠೋಪಕರಣಗಳ ಕ್ರಮೀಕರಣ ಹೇಗೆ ಮಾಡುವುದೆಂಬ ಯೋಜನೆ ತಯಾರಿಸುವುದು.<br>■ ವ್ಯತ್ಯಸ್ಥ ಭೌತಿಕ ನೈಪುಣಿ ಹಾಗೂ ಗಾತ್ರದಲ್ಲಿ ವ್ಯತ್ಯಾಸವಿರುವ ಮಕ್ಕಳು ಒಂದೇ ಆಟದಲ್ಲಿ ಏರ್ಪಡುವುದು, ಒಟ್ಟಾಗಿ ಕ್ರೀಡಾ ಚಟುವಟಿಕೆಗಳನ್ನು ಮಾಡುವುದು ಮುಂತಾದ ಸಂದರ್ಭಗಳಲ್ಲಿ ಸ್ವೀಕರಿಸಬೇಕಾದ ಸಮೀಪನೆಗಳನ್ನು ಕಂಡುಹಿಡಿಯುವುದು. |
| ವಿಕಾಸ ಮಂಡಲಗಳು<br>2.6 ವೈಜ್ಞಾನಿಕ ವಿಕಾಸ (cognitive development)<br>• ವೈಜ್ಞಾನಿಕ ವಿಕಾಸ, ಸಾಮಾನ್ಯ ತಿಳುವಳಿಕೆ – ಪಿಯಾಷೆಯ ಆಶಯಗಳು, ಸ್ಕೀಮಾಗಳು, ಅನುಕೂಲತಗಳು (adaptation) ಸ್ವಾಯತ್ತತೆಗೊಳಿಸುವುದು (assimilation ), ಸಂಸ್ಕರಿಸುವುದು (accomodation ) ಸಂತುಲಿತಾವಸ್ಥೆ. ವೈಜ್ಞಾನಿಕ ರಚನೆಯ ವಿಕಾಸವು ಒಂದು ಮುಂದುವರಿಯುತ್ತಿರುವ ಪ್ರಕ್ರಿಯೆ – ಭೌತಿಕ ವಿಕಾಸ ಹಂತಗಳು– ಇಂದ್ರಿಯ ಚಲನಾ ಹಂತ (0 – 2) ಪ್ರಾಗ್ ಮನೋವ್ಯಾಪಾರ ಹಂತ (7 ರಿಂದ 11) ಅಮೂರ್ತ ಚಿಂತನ ಹಂತ (11 – 17) ಪ್ರತಿಯೊಂದು ಹಂತದ ಪ್ರತ್ಯೇಕತೆಗಳು– ಪ್ರಾಥಮಿಕ ಹಂತದ ಮಗುವಿನ ಭೌತಿಕ ಪ್ರತ್ಯೇಕತೆಗಳು – ಕಲಿಕಾ ಚಟುವಟಿಕೆಗಳನ್ನು ನೀಡುವಾಗ ವೈಜ್ಞಾನಿಕ ವಿಕಾಸ ಹಂತದ ಪ್ರತ್ಯೇಕತೆಗಳನ್ನು ಪರಿಗಣಿಸಬೇಕಾದ ಅವಶ್ಯಕತೆ. | • ಬೋಧನೆ, ಕಲಿಕೆ, ಕಲಿಕಾ ಸಾಮಾಗ್ರಿಗಳ ತಯಾರಿ, ಪಠನೋಪಕರಣಗಳು, ಆಟಿಕೆಗಳು ಎಂಬಿವುಗಳನ್ನು ಆಯ್ಕೆಮಾಡುವುದು/ ನಿರ್ಮಿಸುವುದು ಮುಂತಾದ ಮಂಡಲಗಳಲ್ಲಿ ಪಿಯಾಷೆಯ ಆಶಯಗಳನ್ನು ಪ್ರಯೋಗಿಸುವ ವೈಜ್ಞಾನಿಕ ತಳಹದಿಯನ್ನು ಗಳಿಸುವುದು.<br>■ ವಿಭಿನ್ನ ಪ್ರಾಯದ ಮಕ್ಕಳು ರಚಿಸಿದ ಚಿತ್ರಗಳನ್ನು ತುಲನೆ ಮಾಡಿ ವೈಜ್ಞಾನಿಕ ವಿಕಾಸಕ್ಕೆ ಅನುಗುಣವಾದ ಸ್ವಭಾವ ವಿಶೇಷತೆಗಳನ್ನು ಕಂಡುಕೊಳ್ಳುವುದು.<br>■ ಪಿಯಾಷೆಯ ಪ್ರಯೋಗಗಳನ್ನು ಆವರ್ತಿಸಿ ಕಂಡುಕೊಂಡವುಗಳನ್ನು ದಾಖಲಿಸುವುದು.<br>■ ವಿವಿಧ ವಿಕಾಸ ಹಂತದಲ್ಲಿರುವ ಕಲಿಕಾರ್ಥಿಗಳಿಗೆ ಯೋಗ್ಯವಾದ ಕಲಿಕಾ/ ಬೋಧನಾ ತಂತ್ರಗಳನ್ನು ಕಂಡುಹಿಡಿದು ದಾಖಲಿಸುವುದು, ಚರ್ಚೆ ಮಾಡುವುದು |

| ವಿಷಯ | ವಿನಿಮಯ ರೀತಿಗಳು |
|---|---|
| 2.7 ಸಾಮಾಜಿಕ ವಿಕಾಸ, ಮನೋಭಾವದ ವಿಕಾಸ, ನೈತಿಕ ವಿಕಾಸ (Social development, emotional development & moral development)<br>• ಸಾಮಾಜಿಕ ವಿಕಾಸಕ್ಕೆ ಸಂಬಂಧಪಟ್ಟು ಸಾಮಾನ್ಯ ತಿಳುವಳಿಕೆ ಸಾಮಾಜಿಕ ವಿಕಾಸಕ್ಕೆ ಸಂಬಂಧಪಟ್ಟು ಎರಿಕ್‌ಸನ್‌ನ ಸಿದ್ಧಾಂತ (8 ಹಂತಗಳ ವಿವರಣೆ) ಸಾಮಾಜಿಕ ವಿಕಾಸಕ್ಕೆ ಸಂಬಂಧಿಸಿದ ಬಂಧೂರನ ನಿರೀಕ್ಷಣೆಗಳು – ಅನುಕರಣೆ, ಆವರ್ತನೆ, ಮೋಡಲಿಂಗ್ ಎಂಬಿವುಗಳ ಪ್ರಾಧಾನ್ಯತೆ, ಸ್ವಸಾಮರ್ಥ್ಯ (Self efficiency) ವನ್ನು ಅಭಿವೃದ್ಧಿ ಪಡಿಸುವುದರ ಪ್ರಾಧಾನ್ಯತೆ– ಸಾಮಾಜಿಕ ವಿಕಾಸವು ಸಮಗ್ರ ವಿಕಾಸಕ್ಕೆ, ಭಾವನಾತ್ಮಕ ವಿಕಾಸ, ನೈತಿಕ ವಿಕಾಸ, ಕೋಲ್ ಬರ್ಗ್ ನ ಸಿದ್ಧಾಂತ.<br>2.8 ಚಲನಾ ವಿಕಾಸ (Motor development)<br>• ಚಲನಾ ವಿಕಾಸದ ಕುರಿತು ಸಾಮಾನ್ಯ ತಿಳುವಳಿಕೆ– ಪ್ರಭಾವ ಬೀರುವ ಘಟಕಗಳು, ಇತರ ವಿಕಾಸ ಮಂಡಲಗಳೊಂದಿಗಿರುವ ಸಂಬಂಧ.<br><br>2.9 ಆಟಗಳು – ಸಮಗ್ರ ವಿಕಾಸಕ್ಕಿರುವ ಸ್ಥಾನ<br>• ಆಟಗಳು – ಕರ್ತವ್ಯಗಳು, ಪ್ರತ್ಯೇಕತೆಗಳು – ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸ್ಥಿತಿಗತಿಗಳು ಕ್ರೀಡೆಗಳಲ್ಲಿ ಉಂಟುಮಾಡುವ ಬದಲಾವಣೆಗಳು<br>• ವ್ಯತ್ಯಸ್ತ ವಿಕಾಸ ಮಂಡಲಗಳಲ್ಲಿ ಆಟಗಳು ಬೀರುವ ಪ್ರಭಾವ<br><br>• ಜೀವನ ವಿಕಾಸ (Life span development) ಮೂಲಭೂತ ವಿಚಾರಗಳು | • ಮಗುವಿನ ಸಾಮಾಜಿಕ ವಿಕಾಸದ ಮೇಲೆ ಪ್ರಭಾವ ಬೀರುವ ವ್ಯತ್ಯಸ್ತ ಘಟಕಗಳನ್ನು ಕಂಡುಹಿಡಿಯುವುದೂ ಸಾಮಾಜಿಕ ವಿಕಾಸ, ಕಲಿಕೆ, ಇತರ ಮಕ್ಕಳೊಂದಿಗಿನ ಭಾಗವಹಿಸುವಿಕೆ ಎಂಬಿವುಗಳು ಹೇಗೆ ಪ್ರಭಾವ ಬೀರುವುದು ಎಂಬುದನ್ನು ತಿಳಿಯುವುದು.<br>• ಗುಣಮಟ್ಟದ ಸಾಮಾಜಿಕ ವಿಕಾಸವನ್ನು ಅಭಿವೃದ್ಧಿಗೊಳಿಸುವ ರೀತಿಯಲ್ಲಿ ವಿನಿಮಯ ರೀತಿಗಳನ್ನು ತರಗತಿಯಲ್ಲಿ ಉಪಯೋಗಿಸುವುದಕ್ಕೂ ಪ್ರೋತ್ಸಾಹ ನೀಡಲು ಸಾಧ್ಯವಾಗುವುದು.<br>■ ವರ್ತನಾ ಸಮಸ್ಯೆಗಳನ್ನು ಪ್ರಕಟಿಸುವ ಮಕ್ಕಳ ಕುಟುಂಬದ ವಾತಾವರಣ, ಅವರೊಡನೆ ತಂದೆತಾಯಿಯರು ವ್ಯವಹರಿಸುವ ರೀತಿ ಎಂಬಿವುಗಳನ್ನು ಕಂಡುಹಿಡಿಯಲಿರುವ ಸಂದರ್ಶನದ ಪ್ರಶ್ನಾವಳಿಯನ್ನು ತಯಾರಿಸಿ ಮಾಹಿತಿಗಳನ್ನು ಸಂಗ್ರಹಿಸಿಸುವುದು.<br>■ ಪ್ರಸ್ತುತ ಸಾಮಾಜಿಕ ಸಮಸ್ಯೆಗಳೊಡನೆ ವಿಭಿನ್ನ ಪ್ರಾಯದ ಮಕ್ಕಳು ಹೇಗೆ ಪ್ರತಿಕ್ರಿಯಿಸುವರು ಎಂಬುದನ್ನು ಕಂಡುಹಿಡಿಯುವುದು. ಪ್ರಕ್ರಿಯೆಗಳ ಹಿಂದಿನ ಸಾಮಾಜಿಕ ವೀಕ್ಷಣೆಯನ್ನು ವಿಶ್ಲೇಷಿಸುವುದು.<br>■ ಯೋಗ್ಯವಾದ ಒಂದು ಅಥವಾ ಎರಡು ಲಘು ಕಾರ್ಟೂನ್ ಫಿಲ್ಲಿಂಗ್‌ಗಳನ್ನು ಆಧಾರವಾಗಿರಿಸಿ ಕಾರ್ಟೂನ್ ಸಿನಿಮಗಳು ಮಕ್ಕಳ ಸ್ವಭಾವ ರೂಪೀಕರಣದಲ್ಲೂ ವರ್ತನೆಯಲ್ಲಿಯೂ ಕಲಿಕಾ ವಿಷಯದಲ್ಲಿಯೂ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂದು ಪ್ರತಿಕ್ರಿಯೆಗಳನ್ನು ಮೌಲ್ಯಮಾಪನ ಮಾಡಿ ವಿಶ್ಲೇಷಣೆ ಕೈಗೊಳ್ಳಬೇಕು.<br><br>▶ ಒಂದು ಮಗುವಿನ ಸರ್ವತೋಮುಖ ವಿಕಾಸಕ್ಕೆ ಕ್ರೀಡೆಯು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗುವುದು?<br><br>▶ ವಿವಿಧ ತರದ ಕ್ರೀಡೆಗಳ ಮೂಲಕ ಬೆಳೆಸಿಕೊಳ್ಳಬಹುದಾದ ಸಾಮಾಜಿಕ ಮೌಲ್ಯಗಳು ಯಾವುವು?<br><br>■ ಪ್ರೀಸ್ಕೂಲ್, LP ಶಾಲೆ ಎಂಬೀ ವಿಭಾಗಗಳಲ್ಲಿ ಒಳಗೊಳ್ಳುವ ಮಕ್ಕಳು ಆಡುವ ವಿವಿಧ ಕ್ರೀಡೆಗಳನ್ನು ನಿರೀಕ್ಷಿಸಿ ಅವುಗಳ ಆಧಾರದಲ್ಲಿ ವ್ಯತ್ಯಾಸವನ್ನು ಕಂಡುಕೊಳ್ಳುವುದು.<br>■ ಕ್ರೀಡೆಗಳಲ್ಲಿ ಅಡಗಿರುವ ಚಟುವಟಿಕೆಗಳನ್ನು ವಿಶ್ಲೇಷಿಸಿ ಅವು ಯಾವೆಲ್ಲಾ ಬೌದ್ಧಿಕ ಸಾಮರ್ಥ್ಯಗಳೊಂದಿಗೆ ಸಂಬಂಧಪಟ್ಟಿರುವುದು ಎಂಬುದನ್ನು ವಿವರಿಸುವುದು. |
| **ಯೂನಿಟ್ – 3 ಕಲಿಕೆ (ಸಮಯ : 35 ಘಂಟೆಗಳು)**<br>3.1 ಕಲಿಕೆಯ ಸಾಮಾನ್ಯ ತಿಳುವಳಿಕೆಗಳು<br>• ಕಲಿಕಾರ್ಥಿಯು ಹೊಸ ಆಂತರಿಕ ದೃಷ್ಟಿಕೋನವನ್ನು ಗಳಿಸುವುದೋ ಹಳೆಯದನ್ನು ಬದಲಾಯಿಸುವ ಪ್ರಕ್ರಿಯೆಯೋ ಆಗಿದೆ ಕಲಿಕೆ.<br>• ಕಲಿಕೆ (ಲೆವಿನ್) – ಜೀವಜಾಲಗಳ ಪ್ರಚಲಿತ ವ್ಯವಹಾರಗಳಲ್ಲಿ ಬರುವ ಬದಲಾವಣೆಯಾಗಿದೆ ಕಲಿಕೆ/ವ್ಯಕ್ತಿಗಳ ಅಪೇಕ್ಷಣೀಯ ವ್ಯವಹಾರ ಬದಲಾವಣೆ<br>- ಸಕ್ರೀಯವಾದ ಪ್ರಕ್ರಿಯೆ ಆಗುವಾಗ ಕಲಿಕೆಯು ಹೆಚ್ಚು ಫಲಕಾರಿಯಾಗುವುದು – ಪಕ್ವತೆಯಿಂದ ವ್ಯಕ್ತಿಯಲ್ಲಿ ಉಂಟಾಗುವ ಬದಲಾವಣೆಗಳು ಕಲಿಕೆ ಆಗಿ ಪರಿಗಣಿಸುವುದಿಲ್ಲ. ಒಬ್ಬ ವ್ಯಕ್ತಿಗೆ ನೇರವಾಗಿ ಲಭಿಸುವ ಅನುಭವಗಳು ಮಾತ್ರವಲ್ಲ ಕಲಿಕೆಯಾಗಿ ಮಾರ್ಪಡುವುದು. ಇತರರಿಗೆ ಲಭಿಸುವ ಅನುಭವಗಳನ್ನು ನಿರೀಕ್ಷಣೆಗಳ ಮೂಲಕ ವ್ಯವಹಾರ ಬದಲಾವಣೆಗಾಗಿ ಉಪಯೋಗಿಸಬೇಕು.<br>• ಕಲಿಕೆಯು ಅನುರೂಪೀಕರಣ ಪ್ರಕ್ರಿಯೆಯಾಗಿದೆ. | • ನಿತ್ಯ ಜೀವನದ ಸಂದರ್ಭಗಳು, ಕೆಲವು ಬೌದ್ಧಿಕ ಕರ್ತವ್ಯಗಳು, ಕಲಿಕಾ ಚಟುವಟಿಕೆಗಳು ಎಂಬಿವುಗಳಲ್ಲಿ ಕಲಿಕೆಯ ಕುರಿತಾದ ಆಶಯಗಳು ಪ್ರತಿಫಲಿಸುವುದು ಹೇಗೆ ಎಂದು ಕಂಡುಕೊಳ್ಳುವುದು. |

| ವಿಷಯ | ವಿನಿಮಯ ರೀತಿಗಳು |
| --- | --- |
| 3.2 ಕಲಿಕೆಯ ಕುರಿತಿರುವ ಐದು ಸಮೀಪನೆಗಳು<br>• (behavioral, social cognitive, information processing, gestalt, cognitive constructivist, social constructivist).ಗೆಸ್ಟಾಲ್‌ರವರ ನಿರೀಕ್ಷಣೆ.<br>3.2.1 ವ್ಯತ್ಯಸ್ತ ಕಲಿಕಾ ಸಮೀಪನೆಗಳು – ಉದ್ಭವವೂ ಬೆಳವಣಿಗೆಯೂ, ವ್ಯವಹಾರವಾದ (behaviour) ಸಂಬಂಧವಾದ (connectionism) ಶ್ರಮಪರಾಜಯ ಸಿದ್ಧಾಂತ (Trial & error theory) ಅನುಬಂಧ ಸಿದ್ಧಾಂತ (conditioning) ಮುಂತಾದವುಗಳ ನೇತಾರರು – ಪಾವ್‌ಲೋ, ಥೊಂಡೈಕ್, ಸ್ಕಿನ್ನರ್, ವಾಟ್ಸನ್ – ಪ್ರಸಿದ್ಧವಾದ ಪ್ರಯೋಗಗಳು – ವ್ಯವಹಾರವಾದದ ವಿದ್ಯಾಭ್ಯಾಸ ಪರವಾದ ಪ್ರಾಧಾನ್ಯತೆ. | ▲ ಸರಳವಾದ ಘಟಕಗಳಾಗಿ ಮಾಡಲು ಸಾಧ್ಯವಾಗದ ಸಂಕೀರ್ಣವಾದ ಕಲಿಕಾ ಜವಾಬ್ದಾರಿಗಳು ವ್ಯವಹಾರವಾದ ಸಮೀಪನಕ್ಕೆ ಎಷ್ಟರ ಮಟ್ಟಿಗೆ ಪ್ರಸಕ್ತಿ ಇದೆ?<br>■ ವ್ಯವಹಾರವಾದದ ಆಶಯಗಳು ಶಿಕ್ಷೆ, ಪ್ರಶಂಸೆ, ಪ್ರೋತ್ಸಾಹ, ಪ್ರೇರಣೆ ಬೆಳೆಸುವುದು ಇತ್ಯಾದಿ ಮಂಡಲಗಳಲ್ಲಿ ಹೇಗೆ ಪ್ರಯೋಗಿಸಬಹುದು ಎಂಬುದನ್ನು ತಿಳಿದುಕೊಳ್ಳುವುದು.<br>■ ತರಗತಿ ನಿರೀಕ್ಷಣೆಯ ಮೂಲಕ ವ್ಯವಹಾರವಾದ ಆಶಯಗಳು ಯಾವೆಲ್ಲಾ ಸಂದರ್ಭಗಳಲ್ಲಿ ಅಧ್ಯಾಪಕರು ಪ್ರಯೋಗಿಸುತ್ತಾರೆ ಎಂಬುದನ್ನೂ ಯಾವೆಲ್ಲಾ ಸಂದರ್ಭಗಳಲ್ಲಿ ಪ್ರಯೋಗಿಸಬಹುದು ಎಂಬುದನ್ನೂ ಕಂಡು ಹಿಡಿದು ಚರ್ಚಿಸುವುದು. ಅಧ್ಯಾಪಕನ ಭಾಷೆ, ಶರೀರ ಭಾಷೆ, ತರಗತಿ ನಿಯಂತ್ರಣ ರೀತಿಗಳು ಎಂಬಿವುಗಳನ್ನು ನಿರೀಕ್ಷಿಸುವುದು. |
| 3.2.2 ಸಾಮಾಜಿಕ ವೈಜ್ಞಾನಿಕವಾದ<br>ಆಲ್ಬರ್ಟ್ ಬಂಧೂರವರ ಸಿದ್ಧಾಂತ – ಕಲಿಕೆಯಲ್ಲಿ ಪ್ರಭಾವ ಬೀರುವುದು ಸಾಮಾಜಿಕ, ವೈಜ್ಞಾನಿಕ, ವ್ಯವಹಾರ ಘಟಕಗಳಾಗಿವೆ.<br>(Self - efficiency) - ನಿರೀಕ್ಷಣಾತ್ಮಕ ಕಲಿಕೆ (Observational learning) ಮತ್ತು ಅದರ ಪ್ರತಿಕ್ರಿಯೆಗಳು.<br>(attention), (retention), (Production), (motivation) | ▲ ಸ್ವ ವರ್ತನೆಯ ಮೂಲಕ ಅಧ್ಯಾಪಕರು ವಿದ್ಯಾರ್ಥಿಗಳಿಗೆ ನೀಡಬೇಕಾದ ಮಾದರಿಗಳು ಏನಾಗಿರಬೇಕು?<br>▲ ಅನುಕರಣೆಯ ಮೂಲಕವಿರುವ ಕಲಿಕೆ, ತರಗತಿ ಕೋಣೆಯಲ್ಲಿ ಉಪಯೋಗಿಸಲಿರುವ ಸಾಧ್ಯತೆಗಳು ಯಾವುವು?<br>■ ವ್ಯತ್ಯಸ್ತ ಸಾಮಾಜಿಕ ಹಿನ್ನೆಲೆಗಳು ಕಲಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಕಂಡುಕೊಳ್ಳುವುದು. (ಉದಾ:–ಒಂದು ಕೃಷಿಕ ಕುಟುಂಬದಿಂದ ಲಭಿಸುವ ಕಲಿಕಾ ಪರವಾದ ಸಾಮರ್ಥ್ಯಗಳು ಯಾವುದೆಲ್ಲ?)<br>■ ಒಬ್ಬ ಮೆಂಟರ್ ಆಗಿ ಕಾರ್ಯವೆಸಗುವ ಅಧ್ಯಾಪಕನಿಗೆ ಇರಬೇಕಾದ ಗುಣಗಳನ್ನು ವಿವಿಧ ಅಧ್ಯಾಪಕರ ತರಗತಿಗಳನ್ನು ನಿರೀಕ್ಷಿಸಿ ಕಂಡು ಹಿಡಿಯುವುದು.<br>■ ಅಪೇಕ್ಷಣೀಯ ಮಾದರಿಗಳಾಗಿ ವಿದ್ಯಾರ್ಥಿಗಳ ಮುಂದೆ ಮಂಡಿಸಬಹುದಾದ ಕೆಲವು ವ್ಯಕ್ತಿತ್ವಗಳನ್ನು ನಿರ್ದೇಶಿಸಿ ಅವರ ಯಾವ ವ್ಯಕ್ತಿತ್ವ ಪ್ರತ್ಯೇಕತೆಗಳು ಮಕ್ಕಳಿಗೆ ಮಾದರಿಯಾಗುವುದು ಎಂದು ಚರ್ಚಿಸುವುದು.<br>■ ನಿರೀಕ್ಷಣೆಯ ಮೂಲಕ ಇತರ ಮಕ್ಕಳಿಗೆ ಮಾದರಿಯಾಗುವಂತಹ ಸ್ವಭಾವ ಪ್ರತ್ಯೇಕತೆಗಳು ಕೆಲವು ಮಕ್ಕಳಿಗೆ ಇದೆಯೇ ಎಂಬುವುದನ್ನು ಕಂಡುಕೊಳ್ಳುವುದು. ತರಗತಿ ಕೋಣೆಯ ಸಂದರ್ಭದಲ್ಲಿ ಇತರ ಮಕ್ಕಳಿಗೆ ಮಾದರಿಯಾಗಿ ಇವುಗಳನ್ನು ಹೇಗೆ ವಿನಿಯೋಗಿಸಬಹುದು ಎಂಬುದನ್ನು ಚರ್ಚಿಸುವುದು.<br>■ ಜನಪ್ರಿಯ ಸಿನೆಮಾಗಳು / ಟೆಲಿವಿಷನ್ ಧಾರಾವಾಹಿಗಳು ಎಂಬಿವುಗಳ ಕಥಾಪಾತ್ರಗಳು ಯಾವ ರೀತಿಯ ಮಾದರಿಗಳನ್ನು ಮಕ್ಕಳಿಗೆ ನೀಡುವುದು ಎಂದು ವಿಶ್ಲೇಷಿಸಬೇಕು. (ಮೌಲ್ಯಗಳು, ವರ್ತನಾ ರೀತಿಗಳು) |
| 3.2.3 ಮಾಹಿತಿ ವಿಶ್ಲೇಷಣಾ ಸಿದ್ಧಾಂತ (Information - processing approach) ಭೌದ್ಧಿಕ ಸಾಮರ್ಥ್ಯವನ್ನುಪಯೋಗಿಸಿ ಮಾಹಿತಿಗಳನ್ನು ವಿಶ್ಲೇಷಣೆ ಮಾಡಿ ಕ್ರೋಡೀಕರಿಸುವುದಾಗಿದೆ ಕಲಿಕೆಯ ಮೂಲ – ಜ್ಞಾಪಕಾ ಶಕ್ತಿ, ಚಿಂತನಾ ಸಾಮರ್ಥ್ಯಗಳಿಗೆ ಕಲಿಕೆಯಲ್ಲಿ ಹೆಚ್ಚಿನ ಪ್ರಾಧಾನ್ಯತೆ – ನೆನಪು, ಗಮನ, ಮಾಹಿತಿಗಳನ್ನು ವ್ಯವಸ್ಥಿತಗೊಳಿಸುವುದು, ಮರೆವು ಎಂಬಿವುಗಳ ಮೇಲೆ ಪ್ರಭಾವ ಬೀರುವ ಘಟಕಗಳು ಅವುಗಳು ಕಲಿಕೆಯಲ್ಲಿ ವಹಿಸುವ ಪಾತ್ರ. | ■ ವ್ಯತ್ಯಸ್ತ ವಿಷಯಗಳ ಆಶಯಗಳನ್ನು ವಿಶ್ಲೇಷಣೆಮಾಡಿ ಪ್ರಸ್ತುತ ಆಶಯಗಳನ್ನು ಗ್ರಹಿಸುವುದಕ್ಕೆ ಜ್ಞಾಪಕ ಶಕ್ತಿಗಿರುವ ಪಾತ್ರಗಳನ್ನು ಕಂಡುಕೊಳ್ಳುವುದು.<br>■ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಉಪಯೋಗಿಸಬಹುದಾದ ತಂತ್ರಗಳನ್ನು ವ್ಯತ್ಯಸ್ತ ವಿಷಯಗಳ ಆಶಯಗಳ ಆಧಾರದಲ್ಲಿ ವಿವರಿಸುವುದು. |

| ವಿಷಯ | ವಿನಿಮಯ ರೀತಿಗಳು |
|---|---|
| - ತಿಳಿಯುವುದು ಹೇಗೆಂಬುದನ್ನು ಕಂಡುಕೊಳ್ಳುವುದು (metacognition)<br>3.2.4 ಜ್ಞಾನ – ಜ್ಞಾನ ನಿರ್ಮಾಣದ ಸಮೀಪನೆ (Cognitive constructivist approach)<br>ಉನ್ನತ ಮಟ್ಟದ ಭೌದ್ಧಿಕ ಪ್ರಕ್ರಿಯೆಗಳನ್ನು ಪ್ರಯೋಗಿಸಿಕೊಂಡು ಜ್ಞಾನ ನಿರ್ಮಾಣ ಹಾಗೂ ಆಶಯ ಗ್ರಹಿಸುವಿಕೆಯಾಗಿದೆ. | ■ ಪಾಠಭಾಗಗಳನ್ನು ವಿಶ್ಲೇಷಿಸಿ ಆಶಯ ಗ್ರಹಣವನ್ನು ನಡೆಸುವುದಕ್ಕೆ ಅವಶ್ಯಕವಾದ ಮಾನಸಿಕ ಪ್ರಕ್ರಿಯೆಗಳನ್ನು ಕಂಡುಕೊಳ್ಳುವುದು.<br>■ ವಿವಿಧ ವಿಷಯಗಳ ಕಲಿಕಾ ಚಟುವಟಿಕೆಗಳನ್ನು ವೀಶ್ಲೇಷಿಸಿ ಅವುಗಳಲ್ಲಿ ಅಡಕವಾಗಿರುವ ಚಿಂತನಾ ಸಾಮರ್ಥ್ಯವನ್ನು ಕಂಡುಹಿಡಿಯುವುದು. |
| - ಆಶಯಗಳ ರೂಪೀಕರಣ<br>(concept formation, thinking and reasoning)<br>critical thinking & creative thinking, ಸಮಸ್ಯೆಯ ಪರಿಹಾರ,<br>ಪಿಯೂಷೆಯ ಸಿದ್ಧಾಂತಗಳು ವೈಜ್ಞಾನಿಕ ವಿಕಾಸದ ಹಂತಗಳು (Stage theory)<br>-<br>ಸ್ವಾಯತ್ತತೆ ಮತ್ತು accomodation<br>– ಸ್ಕೀಮ – | |
| 3.2.5 ಸಾಮಾಜಿಕ ಜ್ಞಾನ ನಿರ್ಮಾಣ ಸಮೀಪನೆಗಳು<br>ಇತರರೊಡನೆ ಸಹಕರಿಸಿ ವರ್ತಿಸುವುದರ ಮೂಲಕ ರೂಪುಗೊಳ್ಳುವ ಜ್ಞಾನ ನಿರ್ಮಾಣ, ಆಶಯ ಗ್ರಹಣ ಎಂಬಿವುಗಳಿಗೆ ಕಲಿಕೆಯಲ್ಲಿ ಪ್ರಾಧ್ಯಾನ್ಯತೆ–ಕಲಿಕೆಯ ಸಾಮಾಜಿಕ ಹಿನ್ನೆಲೆ ಪರಸ್ಪರ ವಿನಿಮಯಗಳು ಕಲಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ? ಸಹಾಯ ಹಸ್ತ ನೀಡುವುದು (Scaffolding) (Cognitive apprenticeship) ವಿವಿಧ ವಿಷಯಗಳ ಆಶಯಗಳ ಆಧಾರದಲ್ಲಿ ವಿವರಿಸುವುದು.<br>ಜೆರೋಂ ಬ್ರೂಣರ ಕಲಿಕಾ ಸಂಕಲ್ಪಗಳು (ಕಂಡುಕೊಳ್ಳುವ ಕಲಿಕೆ), ಆಶಯ ರೂಪೀಕರಣ ಹಂತಗಳು, ಆಶಯದಾನ ಮಾದರಿ, ವರ್ಗೀಕರಣ, ಪ್ರಕ್ರಿಯಾ ಬಂಧಿತ ಕಲಿಕೆ)<br>ವೈಗೋಟ್ಸ್‌ಕಿಯ ಕಲಿಕಾ ಸಂಕಲ್ಪಗಳು, ಸಾಂಸ್ಕೃತಿಕ ಉಪಾದಿಗಳನ್ನು (Cultural tools) ಉಪಯೋಗಿಸುವುದರ ಮೂಲಕ ನಡೆಯುವುದು ZPD, ಪ್ರತಿಕ್ರಿಯಾ ಕಲಿಕೆ (reciprocal teaching) | ■ ಕಲಿಕಾ ಸಂದರ್ಭಗಳ ಸಮಸ್ಯಾ ಪರಿಹಾರಕ್ಕಿರುವ ಸಾಧ್ಯತೆಗಳು ಮತ್ತು ರೀತಿಗಳನ್ನು ವಿದ್ಯಾರ್ಥಿಗಳು ಚರ್ಚಿಸುವುದನ್ನು ನಿರೀಕ್ಷಣೆ ಮಾಡುವುದು. ಸಮಸ್ಯಾ ಪರಿಹಾರಕ್ಕೆ, ಪರಸ್ಪರ ವಿನಿಮಯಗಳು ಹೇಗೆ ಪ್ರಭಾವ ಬೀರುವುದೆಂದೂ, ಪರಸ್ಪರ ವಿನಿಮಯಗಳನ್ನು ಹೇಗೆ ಪ್ರೋತ್ಸಾಹಿಸಬಹುದೆಂದೂ ವಿಶ್ಲೇಷಣೆ ಮಾಡುವುದು.<br>■ ವಿವಿಧ ವಿಷಯಗಳಿಂದಿರುವ ಆಶಯ ಮಂಡಲಗಳಲ್ಲಿ ಸಹಭಾಗಿತ್ವ ಕಲಿಕೆ ಎಷ್ಟರ ಮಟ್ಟಿಗೆ ಸಾಧ್ಯತೆಯಿದೆಯೆಂದು ಪರಿಶೋಧಿಸುವುದು.<br>■ ಸಂಪನ್ಮೂಲ ಅಧ್ಯಾಪಕರ ತರಗತಿಗಳನ್ನು ನಿರೀಕ್ಷಿಸಿ, ಆಶಯಗಳನ್ನು ಆಧಾರವಾಗಿರಿಸಿ ಅಧ್ಯಾಪಕ ವಿದ್ಯಾರ್ಥಿ ವಿನಿಮಯಗಳು ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದೂ ಅವುಗಳ ಸ್ವಭಾವವೇನೆಂಬುವುದನ್ನು ಕಂಡುಕೊಳ್ಳುವುದು.<br>■ ವಿದ್ಯಾರ್ಥಿಗಳ ಗುಂಪು ಚಟುವಟಿಕೆಗಳನ್ನು ನಿರೀಕ್ಷಿಸಿರಿ. ವಿನಿಮಯಗಳಲ್ಲಿ ಭಾವಗಹಿಸಲು ಹಿಂಜರಿಯುವ ಮಕ್ಕಳ ವ್ಯಕ್ತಿತ್ವದ ಪ್ರತ್ಯೇಕತೆಗಳನ್ನು ತಿಳಿಯಬೇಕು. ಇಂತಹ ಮಕ್ಕಳನ್ನು ದಕ್ಷತೆಯಿಂದೊಡಗೂಡಿದ ಸಹಭಾಗಿತ್ವದೆಡೆಗೆ ಹೇಗೆ ಸಾಗಿಸಬಹುದು ಎಂದು ಚರ್ಚಿಸಿರಿ. |
| - ಸಹಕರಣಾತ್ಮಕ ಮತ್ತು ಸಹವರ್ತಿತ ಕಲಿಕೆ | |
| - ಸಂವಾದಾತ್ಮಕ ಕಲಿಕೆ | |
| - ತರಗತಿ ಕೋಣೆಯ ಪ್ರಾಧಾನ್ಯತೆ | • ರೆಫೆರನ್ಸ್‌ಗಳ ಮೂಲಕ ಮಾಹಿತಿ ಸಂಗ್ರಹ, ಚರ್ಚೆ |
| • ಮಾನವಿಕತಾವಾದ – (ಕಾಲ್‌ರೋಜರ್ಸ್) ಕಲಿಕೆಯ ತ್ವತಗಳು | • ಪ್ಯಾನೆಲ್ ಚರ್ಚೆ |
| • ಕಲಿಕೆಯ ಮೇಲೆ ಪ್ರಭಾವ ಬೀರುವ ಘಟಕಗಳು, ಅಭಿಪ್ರೇರಣೆ, ಪಕ್ವತೆ, ಶ್ರದ್ಧೆ, ಮನೋಭಾವ, ಬುದ್ಧಿ, ಆಕಾಂಕ್ಷೆ, ಕಲಿಕಾರೀತಿ, ಕಲಿಕಾವೇಗ, ಕುಟುಂಬ, ಸಾಮಾಜಿಕ ಘಟಕಗಳು, ಕಲಿಕಾ ವಾತಾವರಣ, ಶಾರೀರಿಕವೂ, ಮಾನಸಿಕವೂ, ಆರೋಗ್ಯಕರವು ಆದ ನ್ಯೂನತೆಗಳು. | |
| - ತರಗತಿ ಕೋಣೆಯ ಪ್ರಾಧಾನ್ಯತೆ. | |

## ಆಕರ ಗ್ರಂಥಗಳು


1. ಜೂಡಿತ್ ಲಾರಿ – ಜೋಯ್ಸ್ (2009) ವಿಜಯದ ಮನೋವಿಜ್ಞಾನ. ಡಿ.ಸಿ.ಬುಕ್ಸ್
2. ಡಾ। ಪಿ.ವಿ. ಪುರುಷೋತ್ತಮನ್ (2008) ವೈಗೋಡ್ಸ್ಕಿಯೂ ವಿದ್ಯಾಭ್ಯಾಸವೂ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್
3. ಡಾ। ಕೆ. ಎಸ್. ಡೇವಿಡ್ (2008), ವ್ಯಕ್ತಿತ್ವ, ದೃಷ್ಟಿಕೋನ ಮತ್ತು ಪ್ರಾಯೋಗಿಕತೆ, ಚಿಂತಾ ಪಬ್ಲಿಕೇಶನ್ಸ್
4. ಸಿಗ್‌ಮಂಡ್ ಫ್ರಾಯಿಡ್ (2008), ಮನಸ್ಸಿನ ಕಿಟಿಕಿಗಳು, ನಿಶಾಗಂಧಿ ಪಬ್ಲಿಕೇಶನ್ಸ್.
5. ಡಾ। ರವಿಶಂಕರ್ ಎಸ್. ನಾಯರ್ (2007), ಪಠ್ಯಪದ್ಧತಿ ಸಿದ್ಧಾಂತ, ಕೇರಳ ಭಾಷಾ ಇನ್‌ಸ್ಟಿಟ್ಯೂಟ್, ತಿರುವನಂತಪುರ
6. ನಿತ್ಯ ಚೈತನ್ಯಯತಿ (2007), ಸ್ನೇಹ ಸಂವಾದ, ಗ್ರೀನ್ ಬುಕ್ಸ್
7. ಡಾ। ಎನ್. ಎಂ. ಮುಹಮ್ಮದಾಲಿ (2007) ಮನಃಶಾಸ್ತ್ರ, ಮನಸ್ಸಿನ ಅನಂತಲೋಕ, ಚಿಂತಾ ಪಬ್ಲಿಕೇಶನ್ಸ್
8. ಬಿ. ಎಸ್. ವಾರಿಯರ್ (2004) ವಿಜಯದ ಮೆಟ್ಟಲುಗಳು, ಡಿ.ಸಿ. ಬುಕ್ಸ್
9. ಒಂದು ಗುಂಪು ಲೇಖಕರು (2003) ವಿದ್ಯಾಭ್ಯಾಸದ ಪರಿವರ್ತನೆಗೆ ಒಂದು ಪೀಠಿಕೆ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು
10. ಪ್ರೊ. ಎನ್. ಶಂಕರನ್ ನಾಯರ್ (1994), ವಿದ್ಯಾಭ್ಯಾಸ ಮನಶ್ಶಾಸ್ತ್ರವೂ ಶಿಶುವಿಕಾಸವೂ (ಭಾಗ 1 ಮತ್ತು 2), ಕೇರಳ ಭಾಷಾ ಇನ್ಸ್ಟಿಟ್ಯೂಟ್, ತಿರುವನಂತಪುರ
11. ನಿತ್ಯಚೈತನ್ಯಯತಿ (1988) ಭಾರತೀಯ ಮನಃಶಾಸ್ತ್ರಕ್ಕೆ ಒಂದು ಪೀಠಿಕೆ, ಕರೆಂಟ್‌ಬುಕ್ಸ್.

### 7.3.2 ಪಠ್ಯಪದ್ಧತಿಯೂ ಬೋಧನಾ ಶಾಸ್ತ್ರವೂ

ಅಧ್ಯಾಪಕ ವಿದ್ಯಾರ್ಥಿಗಳಿಗೆ ಪಠ್ಯಪದ್ಧತಿಯಲ್ಲಿಯೂ ಬೋಧನಾ ಶಾಸ್ತ್ರದಲ್ಲಿಯೂ ಮೌಲ್ಯ ಮಾಪನದಲ್ಲಿಯೂ ಅಡಿಪಾಯವನ್ನುಂಟು ಮಾಡುವುದಕ್ಕೆ ಒಂದನೇ ಸೆಮಿಸ್ಟರಿನಲ್ಲಿ, **'ಪಠ್ಯಪದ್ಧತಿಯೂ ಬೋಧನಾ ಶಾಸ್ತ್ರವೂ'** ಎಂಬ ಪೇಪರನ್ನು ಕಲಿಕೆಗಾಗಿ ನಿರ್ದೇಶಿಸಲಾಗಿದೆ. ವಿವರಣೆಗಳನ್ನು ಕೆಳಗೆ ಕೊಡಲಾಗಿದೆ.

**ಪ್ರಸಕ್ತಿ ಹಾಗೂ ಉದ್ದೇಶಗಳು**

ಶಾಲಾ ಕಲಿಕಾ ಮಂಡಲದಲ್ಲಿ ಕೇವಲ ಕಲಿಕಾರ್ಥಿಯಾಗಿರುವ ವಿದ್ಯಾರ್ಥಿಯನ್ನು ಅಧ್ಯಾಪನ ಪ್ರಕ್ರಿಯೆಗೆ ಪರಿವರ್ತಿಸುವ ಪ್ರಧಾನವಾದ ಕರ್ತವ್ಯಕ್ಕೆ ಇಲ್ಲಿ ಹೆಚ್ಚು ಒತ್ತನ್ನು ನೀಡಲಾಗುವುದು. ಈ ಬದಲಾಯಿಸುವಿಕೆಗೆ ಅಗತ್ಯವಾದ ಜ್ಞಾನ, ಮನೋಭಾವ, ನೈಪುಣ್ಯ, ಸನ್ನದ್ಧತೆಯನ್ನು ರೂಪಿಸುವುದಾಗಿದೆ ನಮ್ಮ ಗುರಿ. ಅದಕ್ಕಾಗಿ ಕಲಿಕಾ ಬೋಧನ ಪ್ರಕ್ರಿಯೆಯ ವಿವಿಧ ಹಂತಗಳನ್ನು ಅಧ್ಯಾಪಕ ವಿದ್ಯಾರ್ಥಿಗಳು ತಿಳಿದಿರಬೇಕು. ಅಂದರೆ ಪಠ್ಯ ಪದ್ಧತಿ, ಬೋಧನಾ ಶಾಸ್ತ್ರ, ಮೌಲ್ಯಮಾಪನ ಎಂಬಿವುಗಳ ಕುರಿತು ಸಮಗ್ರವಾದ ತಿಳುವಳಿಕೆ ಉಂಟಾಗಬೇಕು. ಪಠ್ಯಪದ್ಧತಿಯನ್ನು ಆಧಾರವಾಗಿರಿಸಿ ಬೋಧನೆಯ ನಡೆಯುವುದು. ಆದುದರಿಂದ ಪಠ್ಯಪದ್ಧತಿ ಎಂದರೇನು, ಅದರ ರೂಪೀಕರಣ ಹೇಗೆ ಮುಂತಾದ ವಿಚಾರಗಳನ್ನು ತಿಳಿಯಬೇಕಾಗಿದೆ. ವ್ಯತ್ಯಸ್ಥ ಪ್ರಾಯದಲ್ಲಿರುವ ಮಕ್ಕಳನ್ನು ಅಧ್ಯಾಪಕನು ಹೇಗೆ ಪರಿಗಣಿಸಬೇಕು? ವ್ಯತ್ಯಸ್ಥ ವಿಷಯಗಳನ್ನು ಹೇಗೆ ಸಮೀಪಿಸಬೇಕು? ಇದರ ಹಿಂದಿರುವ ಬೋಧನಾ ಶಾಸ್ತ್ರಪರವಾದ ವೈಜ್ಞಾನಿಕತೆ ಏನು? ಇತ್ಯಾದಿ ವಿಷಯಗಳ ಕುರಿತು ಅಧ್ಯಾಪಕ ವಿದ್ಯಾರ್ಥಿಗೆ ತಿಳುವಳಿಕೆಯುಂಟಾಗಬೇಕು. ಮೌಲ್ಯಮಾಪನವು ಕಲಿಕೆಯ ಅವಿಭಾಜ್ಯ ಘಟಕವಾಗಿದೆ. ಮೌಲ್ಯಮಾಪನವು ಹೇಗೆ ಕಲಿಕೆಯೊಡನೆ ಮುಂದುವರಿಯುವುದು, ಯಾವೆಲ್ಲಾ ತಂತ್ರಗಳನ್ನು ಅದಕ್ಕೆ ಉಪಯೋಗಿಸಬೇಕು ಎಂಬುದನ್ನು ಅಧ್ಯಾಪಕ ವಿದ್ಯಾರ್ಥಿಯು ತಿಳಿಯಬೇಕಾಗಿದೆ. ಕಲಿಕೆಯನ್ನು ಉತ್ತಮ ಪಡಿಸಲು ಮಾಹಿತಿ ತಂತ್ರಜ್ಞಾನದ ಪ್ರಯೋಗವನ್ನು ಬಿಟ್ಟುಬಿಡಲು ಸಾಧ್ಯವಿಲ್ಲ. ವಿಷಯದ ಜ್ಞಾನಾರ್ಜನೆಯೂ ವಿನಿಮಯವೂ ಮಾಹಿತಿ ತಂತ್ರಜ್ಞಾನದ ವಿನಿಮಯದೊಡನೆ ಸೇರಿ ಹೋಗಬೇಕಾಗಿದೆ. ಅದಕ್ಕಾಗಿ ಅಧ್ಯಾಪಕ ವಿದ್ಯಾರ್ಥಿಗಳಿಗೆ ಐ.ಸಿ.ಟಿ. ಸಾಮರ್ಥ್ಯವು ಲಭಿಸಬೇಕು. ಅದಕ್ಕಿರುವ ಸಾಧ್ಯತೆಯನ್ನು ಈ ಪಠ್ಯಪದ್ಧತಿಯು ಮುಂದಿಡುತ್ತದೆ. ಈ ಎಲ್ಲ ದೃಷ್ಟಿಕೋನಗಳ ಆಧಾರದಲ್ಲಿ ಬೋಧನಶಾಸ್ತ್ರವೂ ಪಠ್ಯಪದ್ಧತಿಯೂ ಎಂಬ ಪಾಠಭಾಗವನ್ನು ಕಲಿಕೆಗೆ ನಿರ್ದೇಶಿಸಲಾಗಿದೆ.

**ವಿಷಯಗಳ ಪರಸ್ಪರ ಸಂಬಂಧ (Running Thread)**

ಪಠ್ಯಪದ್ಧತಿ, ಬೋಧನಾ ಶಾಸ್ತ್ರ, ಮೌಲ್ಯಮಾಪನ ಎಂಬಿವುಗಳು ಕಲಿಕೆ ಸಾಧ್ಯವಾಗುವುದಕ್ಕಿರುವ ಮೂಲಭೂತ ಆಶಯಗಳೂ ಸಂಕೇತಗಳೂ ಆಗಿದೆ. ಆದುದರಿಂದಲೇ ಪಠ್ಯಪದ್ಧತಿ ರಚನೆಯ ಮೂಲ ತತ್ವಗಳನ್ನೂ ವಿವಿಧ ತರದ ಪಠ್ಯಪದ್ಧತಿಗಳ ಕುರಿತೂ ತಿಳಿಯಲು ಸಂದರ್ಭವನ್ನು ಒದಗಿಸಬೇಕಾಗಿದೆ. ಪಠ್ಯಪದ್ಧತಿಯ ಕುರಿತು ಮನದಟ್ಟು ಮಾಡಬೇಕಾದರೆ ಅದರ ವಿನಿಮಯ ರೀತಿ ತಿಳಿಯಬೇಕಾಗಿದೆ. ವಿನಿಮಯದಲ್ಲಿ ತೊಡಗಿರುವ ಅಧ್ಯಾಪಕನು, ವಿದ್ಯಾರ್ಥಿಗಳ ಸಂಕೇತಗಳ ಕುರಿತು ವೈಜ್ಞಾನಿಕವಾದ ತಿಳುವಳಿಕೆಯನ್ನು ಗಳಿಸಬೇಕಾಗಿದೆ. ವಿವಿಧ ಬೋಧನಾ ಸಂಪ್ರದಾಯಗಳು, ಬೋಧನಾ ಸಾಮಗ್ರಿಗಳು, ಅವುಗಳ ಆಧಾರದಲ್ಲಿ ಫಲಪ್ರದವಾದ ಯೋಜನೆಗಳು ಮುಂತಾದ ವಿಷಯಗಳನ್ನು ಅಧ್ಯಾಪಕ ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಾನೆ. ಯಾವುದೇ ವಿಷಯಗಳಲ್ಲಿರುವಂತೆ ಮೌಲ್ಯಮಾಪನವು ಬೋಧನಾ ಮಂಡಲದಲ್ಲಿನ ಪ್ರಧಾನ ಘಟಕವಾಗಿದೆ. ಮೌಲ್ಯಮಾಪನದ ವಿವಿಧ ಹಂತಗಳು, ರೀತಿಗಳು, ಪ್ರಾಧಾನ್ಯತೆ ಮೊದಲಾದವುಗಳ ಕುರಿತಿರುವ ಜ್ಞಾನ ಅತೀ ಅವಶ್ಯಕವಾಗಿದೆ. ಈ ರೀತಿಯಲ್ಲಿ ಆಶಯ ತಿಳುವಳಿಕೆಯನ್ನು ಗಳಿಸಿದ ಅಧ್ಯಾಪಕ ವಿದ್ಯಾರ್ಥಿಗಳು ಅಧ್ಯಾಪಕ ಬೆಳವಣಿಗೆಯ ಪ್ರಧಾನ ಮಂಡಲವಾದ ಕಲಿಕಾ ಸಂಶೋಧನೆಗಳನ್ನು ಸರಾಗವಾಗಿ ಮುಂದುವರಿಸುವುದಕ್ಕೆ ಈ ಯೂನಿಟು ಗಮನಹರಿಸುತ್ತದೆ. ಅದಕ್ಕಾಗಿ ಸಂಶೋಧನೆಯ ಪ್ರಾಥಮಿಕ ತಿಳುವಳಿಕೆಗಳನ್ನು ಯೂನಿಟ್‌ನಲ್ಲಿ ಹಂಚಲಾಗಿದೆ. ಮೇಲೆ ಹೇಳಿದ ಎಲ್ಲಾ ಸಂದರ್ಭಗಳಲ್ಲಿಯೂ ಮಾಹಿತಿ ಸಂಗ್ರಹ ಹಾಗೂ ವಿನಿಮಯಕ್ಕೆ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಅದಕ್ಕೆ ಅವಶ್ಯಕವಾದ ಪ್ರಾಥಮಿಕ ನೈಪುಣ್ಯಗಳು ಎಲ್ಲಾ ಮಕ್ಕಳಲ್ಲಿದೆಯೆಂದು ದೃಢಪಡಿಸಬೇಕು. ಆದುದರಿಂದ ಐ.ಸಿ.ಟಿ.ಯ ಪ್ರಾಥಮಿಕ ಪಾಠಗಳ ಜೊತೆಗೆ ಅವುಗಳ ಬೋಧನಾ ಸಾಧ್ಯತೆಗಳನ್ನು ಈ ಯೂನಿಟುಗಳ ಮೂಲಕ ಪರಿಚಯಿಸಲಾಗುವುದು.

**ಉದ್ದೇಶಗಳು**

1. ಅಧ್ಯಾಪಕ ವಿದ್ಯಾಭ್ಯಾಸದಲ್ಲಿ ಪಠ್ಯಪದ್ಧತಿಯ ಮತ್ತು ಬೋಧನಾ ಪದ್ಧತಿಯ ಪ್ರಾಧಾನ್ಯತೆಯನ್ನು ಗುರುತಿಸುವುದಕ್ಕೂ ಅವುಗಳೊಂದಿಗೆ ಅನುಕೂಲ ಮನೋಭಾವವನ್ನು ಬೆಳೆಸುವುದಕ್ಕೂ.
2. ಬೋಧನಾ ಶಾಸ್ತ್ರದ ಪ್ರಯೋಗಗಳನ್ನೂ ಕಲಿಕಾ ಪ್ರಕ್ರಿಯೆಗಳನ್ನೂ ವಿಮರ್ಶನಾತ್ಮಕವಾಗಿ ಪರಿಶೋಧಿಸಿ ಮೌಲ್ಯಮಾಪನ ಮಾಡುವುದಕ್ಕೂ ತಾತ್ವಿಕ ತಿಳುವಳಿಕೆಗಳನ್ನು ರೂಪೀಕರಿಸುವುದಕ್ಕೂ.
3. ಶಿಶುಕೇಂದ್ರೀಕೃತ ಕಲಿಕೆ, ಸಾಧನಾ ಕಲಿಕೆ, ಚಟುವಟಿಕಾಧಾರಿತ ಕಲಿಕೆ ಮುಂತಾದ ಬೋಧನಾ ಶಾಸ್ತ್ರ ರೀತಿಗಳ ಆಶಯಗಳನ್ನು ತಿಳಿದು ಕಾರ್ಯದಕ್ಷತೆಯ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದಕ್ಕೆ ಅಧ್ಯಾಪಕ ವಿದ್ಯಾರ್ಥಿಗೆ ಸಾಮರ್ಥ್ಯ ವನ್ನುಂಟುಮಾಡುವುದು.
4. ಕಲಿಕಾರ್ಥಿಯ ವರ್ತನೆಗೆ ಅನುಸಾರವಾದ ಬೋಧನಾ ತಂತ್ರಗಳನ್ನು ರೂಪೀಕರಿಸುವುದಕ್ಕೂ ವ್ಯವಸ್ಥಿತಗೊಳಿಸುವುದಕ್ಕೂ.
5. ಅಧ್ಯಾಪಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ನೈಪುಣ್ಯವನ್ನು ಬೆಳೆಸುವುದಕ್ಕೆ ಮತ್ತು ಕಾರ್ಯಗತಗೊಳಿಸುವುದಕ್ಕೂ.
6. ಮೌಲ್ಯಮಾಪನಕ್ಕೆ ಸಂಬಂಧಪಟ್ಟ ಆಶಯಗಳನ್ನು ಗಳಿಸುವುದಕ್ಕೂ ನೂತನ ತಂತ್ರಗಳನ್ನು ಕಾರ್ಯಗತಗೊಳಿಸುವುದಕ್ಕೂ.
7. ಐ.ಸಿ.ಟಿ. ಗೆ ಸಂಬಂಧಪಟ್ಟ ನೈಪುಣ್ಯಗಳನ್ನು ಬೋಧನಾ ಪ್ರಕ್ರಿಯೆಗಳಲ್ಲಿಯೂ ಮೌಲ್ಯಮಾಪನ ಚಟುವಟಿಕೆಗಳಲ್ಲಿಯೂ ಅಳವಡಿಸಲ್ಪಡುವುದಕ್ಕಿರುವ ಸಾಮರ್ಥ್ಯವನ್ನು ಗಳಿಸಲು.

| ಪೇಪರಿನ ಸಂಖ್ಯೆ | ಪೇಪರಿನ ಹೆಸರು |
|---|---|
| $S_1.P_2$ | **ಪಠ್ಯಪದ್ಧತಿಯೂ ಬೋಧನಾ ಶಾಸ್ತ್ರವೂ** |

| | | |
|---|---|---|
| ಒಟ್ಟು ಅಂಕಗಳು | : | 80<br>(ನಿರಂತರ ಮೌಲ್ಯನಿರ್ಣಯ CE 20 + ಸಾಮಾನ್ಯ ಪರೀಕ್ಷೆ TE 60) |
| ಒಟ್ಟು ಸೆಮೆಸ್ಟರ್ ಸಮಯ | : | 95 ಗಂಟೆಗಳು |
| ಒಂದು ವಾರದಲ್ಲಿನ ಸಮಯ | : | 5 ಗಂಟೆಗಳು |

**ವಿಷಯಗಳು**

ಯೂನಿಟ್ 1 : ಪಠ್ಯಪದ್ಧತಿ – ಬೋಧನಾ ಪ್ರಕ್ರಿಯೆಯ ಮೂಲ
(ಸಮಯ : 20 ಗಂಟೆಗಳು)

ಯೂನಿಟ್ 2 : ಕಲಿಕಾ ಬೋಧನೆಯ ಸಮೀಪನಗಳು ಮತ್ತು ಬೋಧನಾ ನೈಪುಣ್ಯಗಳು
(ಸಮಯ : 25 ಗಂಟೆಗಳು)

ಯೂನಿಟ್ 3 : ಮೌಲ್ಯಮಾಪನ – ಸಮೀಪನ ಮತ್ತು ಪ್ರಯೋಗ
(ಸಮಯ 20 ಗಂಟೆಗಳು)

ಯೂನಿಟ್ 4 : ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಸಂಶೋಧನೆಗಿರುವ ಸ್ಥಾನ
(ಸಮಯ : 10 ಗಂಟೆಗಳು)

ಯೂನಿಟ್ 5 : ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಮಾಹಿತಿ ತಂತ್ರಜ್ಞಾನ
(ಸಮಯ : 20 ಗಂಟೆಗಳು)

## $S_1.P_2$ ಪಠ್ಯಪದ್ಧತಿಯೂ ಬೋಧನಾ ಶಾಸ್ತ್ರವೂ – ಯೂನಿಟ್ ವಿವರಣೆಗಳು

| ವಿಷಯ | ವಿನಿಮಯ ರೀತಿಗಳು |
|---|---|
| **ಯೂನಿಟ್ 1 : ಪಠ್ಯಪದ್ಧತಿ – ಕಲಿಕಾ ಬೋಧನೆಯ ಪ್ರಕ್ರಿಯೆಯ ಮೂಲ (ಸಮಯ : 20 ಗಂಟೆಗಳು)**<br>**ಪಠ್ಯಪದ್ಧತಿ**<br>- ಆಶಯ/ಊಹನೆ (ideas and concepts)<br>(ಬೋಧನೆಯನ್ನು ಯೋಜನೆ ಮಾಡಲು ಕಲಿಕೆಯನ್ನು ನಿರ್ವಹಣೆ ಮಾಡಲಿರುವ ಸಾಮಾನ್ಯ ಚೌಕಟ್ಟು)<br>- ನಿರ್ವಚನ<br>- ಪಠ್ಯಪದ್ಧತಿ ಯಾಕಾಗಿ?<br>(ಸಾರ್ವತ್ರಿಕ ಶಿಕ್ಷಣವನ್ನು ಜ್ಯಾರಿಗೊಳಿಸಲಿರುವ ಉದ್ದೇಶ)<br>- ವಿಷಯಗಳು | ● ಬೋಧನೆಯನ್ನು ಯೋಜನೆ ಮಾಡಲೂ ಕಾರ್ಯದಕ್ಷತೆಯ ಕಲಿಕೆಯನ್ನು ಸಾಧ್ಯವಾಗಿಸಲು ಆಧಾರ ಮೂಲವಾದ ಸಾಮಾನ್ಯ ಚೌಕಟ್ಟು ಪಠ್ಯಪದ್ಧತಿಯೆಂದು ಮನವರಿಕೆಯಾಗುವುದು.<br>▲ ಪಠ್ಯಪದ್ಧತಿಯ ಆಶಯ, ನಿರ್ವಚನ, ವಿಷಯಗಳು ಮುಂತಾದವುಗಳ ಕುರಿತು ತಿಳುವಳಿಕೆ ಗಳಿಸುವುದು, ಕಲಿಕಾ ಬೋಧನಾ ಪ್ರಕ್ರಿಯೆಗಳಲ್ಲಿ ಎಷ್ಟರ ಮಟ್ಟಿಗೆ ಸಹಾಯ ನೀಡುವುದು?<br>■ ಪಠ್ಯಪದ್ಧತಿಗೆ ಸಂಬಂಧಿಸಿದ ಆಶಯಗಳು, ನಿರ್ವಚನಗಳನ್ನು ಒಳಗೊಂಡಿರುವ ದಾಖಲೆಗಳು, ಪುಸ್ತಕ ಭಾಗಗಳು ಇವುಗಳನ್ನು ಓದಿಕೊಂಡು ವಿಶ್ಲೇಷಣೆ ಮಾಡಿ ಟಿಪ್ಪಣಿ ತಯಾರಿಸಿ ಮಂಡನೆ ಮಾಡುವುದು. |
| ಕಲಿಕೆ, ಬೋಧನೆ, ಯೋಜನೆ<br>- ಪಠ್ಯಪದ್ಧತಿ, ನಿಷ್ಪತ್ತಿಯ, ಚರಿತ್ರೆ<br>(ಸ್ಪರ್ಧೆಯ ಮಾರ್ಗ ಎಂಬರ್ಥ ಬರುವ ಕ್ಯುರಿಯರ್ ಎಂಬ ಲ್ಯಾಟಿನ್ ಪದವಾಗಿದೆ.)<br>ದೇಶೀಯ ಪಠ್ಯಪದ್ಧತಿ<br>ಪಠ್ಯಪದ್ಧತಿಯ ವಿಶಾಲವಾದ ಉದ್ದೇಶಗಳು (goals) ಸೂಕ್ಷ್ಮವಾದ ಉದ್ದೇಶಗಳು, ಬೋಧನಾ ಉದ್ದೇಶಗಳು.<br>- ಪ್ರಾದೇಶಿಕ ಪಠ್ಯಪದ್ಧತಿ<br>- ಪ್ರಾದೇಶಿಕವಾದ ಅನುಭವಗಳನ್ನು ಒಳಪಡಿಸುವುದು. | ● ಪಠ್ಯಪದ್ಧತಿಯ ವಿಶಾಲವಾದ ಉದ್ದೇಶಗಳನ್ನು ವಿಶ್ಲೇಷಣೆ ಮಾಡಿ ಅವುಗಳನ್ನು ಗಳಿಸಿಕೊಳ್ಳಲು ಅಗತ್ಯವಾದ ಕಲಿಕಾ ಚಟುವಟಿಕೆಗಳು ಪಠ್ಯಪದ್ಧತಿಯಲ್ಲಿ ಮತ್ತು ಪಾಠಪುಸ್ತಕಗಳಲ್ಲಿ ಒಳಗೊಂಡಿದೆಯೇ ಎಂದು ಪರಿಶೀಲಿಸಿರಿ. |
| ● ಪಠ್ಯಪದ್ಧತಿಯ ರಚನೆಯ ಮೂಲತತ್ವಗಳು<br>- ಕಲಿಕಾರ್ಥಿಯ ಪ್ರಾಯ<br>- ಸ್ವಭಾವ<br>- ಪರಿಸರ | ● ವಿದ್ಯಾರ್ಥಿಯ ಪ್ರಾಯ, ಸ್ವಭಾವ, ಪರಿಸರಗಳು ಎಂಬಿವುಗಳನ್ನು ಪರಿಗಣಿಸಿಕೊಂಡಿರುವ ಮನಃಶಾಸ್ತ್ರ ಸಮೀಪನೆಗಳಿಂದ ಪರಿಗಣಿಸಿಕೊಂಡು ಪಠ್ಯಪದ್ಧತಿ ರೂಪೀಕರಿಸಬೇಕೆಂದು ಮನವರಿಕೆಮಾಡುವುದು. |
| ● ಮನೋವಿಜ್ಞಾನಪರವಾದ ಸಮೀಪನೆಗಳು<br>  ● ಪರಿಚಿತವಾದವುಗಳಿಂದ ಅಪರಿಚಿತವಾದವುಗಳಿಗೆ<br>  ● ಮೂರ್ತದಿಂದ ಅಮೂರ್ತದೆಡೆಗೆ<br>  ● ಸಮೀಪ ಪರಿಸರಗಳಿಂದ ವಿದೂರ ಪರಿಸರಗಳಿಗೆ | ● ಪಠ್ಯಪದ್ಧತಿಯ ರಚನೆಯಲ್ಲಿ ಪರಿಗಣಿಸಬೇಕಾದ ಮೂಲತತ್ವಗಳು ಯಾವುವೆಲ್ಲಾ?<br>▲ ಪಠ್ಯಪದ್ಧತಿ ಯಾರಿಗೆ? ಅವರ ಪ್ರತ್ಯೇಕತೆಗಳೇನು? ಹಾಗಾದರೆ ಅದರ ಯಾವೆಲ್ಲ ವಿಷಯಗಳನ್ನು ಪರಿಗಣಿಸಬೇಕು? ಮುಂತಾದ ವಿಷಯಗಳನ್ನು ಚರ್ಚಿಸಬೇಕಾಗಿದೆ.<br>■ ಪಠ್ಯಪದ್ಧತಿ ರಚನೆಯಲ್ಲಿ ಅಗತ್ಯವಿರುವ ಘಟಕಗಳು ಯಾವುವೆಲ್ಲವೆಂದು ವಿದ್ಯಾರ್ಥಿಗಳೊಂದಿಗೆ ಚರ್ಚಿಸಬೇಕು. ಅವುಗಳನ್ನು ಕಂಡುಹಿಡಿಯಲು ಬೇಕಾದ ನಿರೀಕ್ಷಣಾ ಸೂಚಕಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ.<br>■ ಈ ನಿರೀಕ್ಷಣಾ ಸೂಚಕಗಳನ್ನುಪಯೋಗಿಸಿ ಮಗುವಿನ ಸ್ವಭಾವ, ಪರಿಸರಗಳು ಎಂಬಿವುಗಳನ್ನು ನಿರೀಕ್ಷಿಸಿ ಪಠ್ಯಪದ್ಧತಿಯ ರಚನೆಯಲ್ಲಿ ಪಾಲಿಸಬೇಕಾದ ಮನಃಶಾಸ್ತ್ರ ಸಮೀಪನೆಗಳಿಗೆ ತಲುಪಬೇಕು. |

| ವಿಷಯ | ವಿನಿಮಯ ರೀತಿಗಳು |
|---|---|
| ● ಪಠ್ಯಪದ್ಧತಿ – ಸಾಮಾಜಿಕ ಅಡಿಪಾಯಗಳು.<br>- ಸಮಾಜದ (ರಾಷ್ಟ್ರದ) ನಿರೀಕ್ಷಣೆಗಳ ಪ್ರತಿಫಲ<br>- ಮನುಷ್ಯನ ಸಂಪನ್ಮೂಲ ಸಾಮರ್ಥ್ಯದ ಪ್ರಗತಿಗಿರುವ ದಾರಿದೀಪ<br>- ಸಮಾಜದ ಅಭಿವೃದ್ಧಿಗಿರುವ ಸಂಚಿತ ವಿಜ್ಞಾನ ಪ್ರಚಾರ.<br>- ಸಾಮಾಜಿಕ ವೀಕ್ಷಣೆ<br>- ಸಾಮಾಜಿಕ ಪ್ರೇರಣೆಗಳ ಪ್ರಭಾವ<br>- ಮಗು ಹಾಗೂ ಸಮಾಜ<br>- ಸಾಂಸ್ಕೃತಿಕ ಪರಿಸರಗಳು<br>- ರಾಷ್ಟ್ರದಲ್ಲಿ ಅಪೇಕ್ಷಣೀಯವಾದ ಪರಿವರ್ತನೆಯನ್ನುಂಟುಮಾಡಲು ಬೇಕಾದ ಶಕ್ತಿ ಮೂಲಗಳು. | ● ಸಮಾಜದ ಅಗತ್ಯತೆಗಳು ಮತ್ತು ಅಭಿರುಚಿಗಳು ಪ್ರತಿಫಲಿಸುವಂತಹುದಾಗಿದೆ ಪಠ್ಯಪದ್ಧತಿಯೆಂದು ತಿಳಿದುಕೊಳ್ಳುವುದು.<br>▲ ಪಠ್ಯಪದ್ಧತಿಯ ರಚನೆಯಲ್ಲಿ ಮಗು, ಸಮಾಜ, ಸಾಂಸ್ಕೃತಿಕ ಪರಿಸರಗಳು ಮುಂತಾದವುಗಳು ಎಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದಿರುವುದು?<br>■ ಮಗುವಿನ ಬೆಳವಣಿಗೆಯಲ್ಲಿ ಮತ್ತು ಅಭಿವೃದ್ಧಿಯಲ್ಲಿ ಸಮಾಜದ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬ ವಿಷಯದ ಆಧಾರದಲ್ಲಿ ಸೆಮಿನಾರ್ ಸಂಘಟಿಸುವುದು. ಚರ್ಚೆಯ ಮೂಲಕ ಪಠ್ಯಪದ್ಧತಿಯ ಸಾಮಾಜಿಕ ಅಡಿಪಾಯಕ್ಕೆ ಗಮನವನ್ನು ನೀಡಬೇಕು.<br>■ ಪ್ರಚಲಿತ ಸಾಮಾಜಿಕ ಸಮಸ್ಯೆಗಳು ಪಠ್ಯಪದ್ಧತಿಯಲ್ಲಿ ಪ್ರತಿಫಲಿಸುವುದೇ ಎಂಬುದನ್ನು ವಿಶ್ಲೇಷಣೆ ಮಾಡಬೇಕು.<br>■ ವಿವಿಧ ಶಾಲಾ ಪದ್ಧತಿಗಳ ಉದ್ದೇಶ, ಅನುಕ್ರಮಣಿಕೆ, ಬೋಧನಾ ಶಾಸ್ತ್ರ ಸಮೀಪನ ಎಂಬಿವುಗಳನ್ನು ಹೋಲಿಕೆ ಮಾಡುವುದು. |
| ● ಪಠ್ಯಪದ್ಧತಿ ರಚನೆಯ ಸಮೀಪನೆಗಳು ಮತ್ತು ವಿವಿಧ ರೀತಿಯ ಪಠ್ಯಪದ್ಧತಿಗಳು<br>- ದಾಖಲೆಯ ಸಮೀಪನೆ<br>- ಚಕ್ರೀಯ ಆರೋಹಣ ಸಮೀಪನೆ<br>- ಉದ್ದೇಶಾಧಾರಿತ ಸಮೀಪನೆ<br>- ಚಟುವಟಿಕಾಧಾರಿತ ಸಮೀಪನೆ<br>- ಪ್ರಾಪ್ತರಾಧಾರಿತ ಸಮೀಪನೆ<br>- ಸಮಸ್ಯಾಧಾರಿತ ಸಮೀಪನೆ<br>- ಇಂಟರ್ ಡಿಸಿಪ್ಲಿನರಿ<br>● ವಿವಿಧ ರೀತಿಯ ಪಠ್ಯಪದ್ಧತಿಗಳು<br>- ಸಂಯೋಜಿತ ಪಠ್ಯಪದ್ಧತಿ<br>- ವಿಷಯಾಧಾರಿತ ಪಠ್ಯಪದ್ಧತಿ<br>- ಚಟುವಟಿಕಾಧಾರಿತ ಪಠ್ಯಪದ್ಧತಿ<br>- ಅನುಭವಾಧಾರಿತ ಪಠ್ಯಪದ್ಧತಿ<br>- ಕೋರ್ ಪಠ್ಯಪದ್ಧತಿ<br>- ಸಂಕೀರ್ಣ ಪಠ್ಯಪದ್ಧತಿ<br>- ಅಂತರ್‌ದೇಶೀಯ ಪಠ್ಯಪದ್ಧತಿ | ● ಪಠ್ಯಪದ್ಧತಿ ರಚನೆಯಲ್ಲಿ ರೇಖಿಯ, ಚಕ್ರೀಯ ಆರೋಹಣ ಸಮೀಪನ, ಚಟುವಟಿಕಾಧಾರಿತ, ಸಮಸ್ಯಾಧಾರಿತ ಮೊದಲಾದ ಹಲವು ದೃಷ್ಟಿಕೋನ ಸಮೀಪನೆಗಳಲ್ಲಿ ಅವಲಂಬಿಸಿದೆಯೇ ಎಂಬುದನ್ನು ತಿಳಿದುಕೊಳ್ಳುವುದು.<br>▲ ಪಠ್ಯಪದ್ಧತಿಯ ರಚನೆಯಲ್ಲಿ ವಿವಿಧ ಸಮೀಪನೆಗಳನ್ನು ಸ್ವೀಕರಿಸಬೇಕಾಗುವುದು ಯಾಕಾಗಿ? ಚರ್ಚಿಸಿರಿ.<br>■ ಪಠ್ಯಪದ್ಧತಿಯ ರಚನೆಯಲ್ಲಿ ಯಾವೆಲ್ಲಾ ವಿಷಯಗಳನ್ನು ಪರಿಗಣಿಸಿಕೊಂಡು ವ್ಯತ್ಯಸ್ತ ಸಮೀಪನೆಗಳನ್ನು ಸ್ವೀಕರಿಸಿರುವುದು – ಚರ್ಚೆ ಮಾಡಿರಿ. |
| ● ಪಠ್ಯಪದ್ಧತಿ ಘಟಕಗಳು<br>- ಉದ್ದೇಶಗಳು<br>- ವಿಷಯಗಳು<br>- ವಿನಿಮಯ ರೀತಿ<br>- ಕಲಿಕಾ ಸಾಮಗ್ರಿಗಳು<br>- ಕಲಿಕಾ ಗಳಿಕೆಗಳು<br>- ಮೌಲ್ಯಮಾಪನ<br>- ಸಮಯ ಧೈರ್ಯ | ● ಯಾವುದೇ ಪಠ್ಯಪದ್ಧತಿಯಲ್ಲಿ ಅಡಕವಾಗಿರುವ ಪ್ರಧಾನ ಘಟಕಗಳನ್ನು ತಿಳಿದುಕೊಳ್ಳುವುದು.<br>▲ ಪಠ್ಯಪದ್ಧತಿಯನ್ನು ಫಲಪ್ರದವಾಗಿ ವಿನಿಮಯ ಮಾಡಬೇಕಾದರೆ ಯಾವುವೆಲ್ಲಾ ಘಟಕಗಳನ್ನು ಪರಿಗಣಿಸಬೇಕು?<br>■ ಕೆಲವೊಂದು ಪಠ್ಯಪದ್ಧತಿಯ ದಾಖಲೆಗಳನ್ನು ಪರಿಶೀಲಿಸುವುದು. ಅವುಗಳಲ್ಲಿ ವಿಶಾಲವಾದ ಉದ್ದೇಶಕ್ಕನುಸಾರವಾಗಿ ವಿಷಯದ ಕಲಿಕಾ ಬೋಧನಾ ಸಮೀಪನೆಗಳು ಹೇಗಿರಬೇಕು ಎಂಬುದರ ಬಗ್ಗೆ ಚರ್ಚೆ. |

| ವಿಷಯ | ವಿನಿಮಯ ರೀತಿಗಳು |
| --- | --- |
| **ಯೂನಿಟ್ 2 : ಕಲಿಕಾ ಬೋಧನಾ ಸಮೀಪನೆ ಮತ್ತು ಬೋಧನಾ ನೈಪುಣ್ಯಗಳು (ಸಮಯ : 25 ಗಂಟೆಗಳು)**<br>**ಅಧ್ಯಾಪಕ, ಅಧ್ಯಾಪನ**<br>- ವಿಷಯ ಪರಿಜ್ಞಾನ<br>- ಮನೋವಿಜ್ಞಾನ ತಿಳುವಳಿಕೆಗಳು<br>- ಐ.ಸಿ.ಟಿ. ಚಟುವಟಿಕೆಗಳಲ್ಲಿನ ಹಿರಿಮೆ<br>- ಅಧ್ಯಾಪನ ತಂತ್ರಗಳಲ್ಲಿರುವ ಕೌಶಲ್ಯಗಳು<br>- ವಿದ್ಯಾರ್ಥಿಗಳ ಕುರಿತಿರುವ ತಿಳುವಳಿಕೆ | • ವಿಷಯ ಪರಿಜ್ಞಾನದೊಂದಿಗೂ ಉತ್ತಮ ಮಂಡನೆಗಳೊಂದಿಗೂ ಮಕ್ಕಳನ್ನು ಅರಿತುಕೊಳ್ಳಲಿರುವ ಉತ್ತಮ ಅಧ್ಯಾಪಕನಾಗಲು ಸಾಧ್ಯವಿದೆಯೆಂಬ ತಿಳುವಳಿಕೆ. |
| • ಅಧ್ಯಾಪನ ನೈಪುಣ್ಯತೆ — Conceptual competency, Contextual, Total performal competency, Commitment<br>- ಮಂಡನಾ ಸಾಮರ್ಥ್ಯ<br>- ವಿವರಣಾ ಸಾಮರ್ಥ್ಯ<br>- ಪ್ರಶ್ನೆಗಳನ್ನು ಕೇಳಲಿರುವ ಸಾಮರ್ಥ್ಯ<br>- ಉತ್ತಮ ಕೇಳುಗಾರ<br>- ಭಾಷಣ ಹಿರಿಮೆ<br>- ಮಾರ್ಗದರ್ಶಿ<br>- ನಿರಂತರ ಕಲಿಕೆಗಾರ<br>- ಗಾನಾಲಾಪನ ನೈಪುಣ್ಯ<br>- ಸ್ವಯಂ ವಿಮರ್ಶನಾ ವಿಶ್ಲೇಷಣಾ ಸನ್ನದ್ಧತೆ | ▲ ಒಂದು ಉತ್ತಮ ಅಧ್ಯಾಪಕನಾಗಲು ಯಾವೆಲ್ಲಾ ವಿಷಯಗಳನ್ನು ಗಮನಿಸಬೇಕಾಗಿದೆ?<br>■ ಯಾವಾಗಲೂ ನೆನಪಿನಲ್ಲುಳಿಯುವ ಅಧ್ಯಾಪಕನ ಪ್ರತ್ಯೇಕತೆಗಳು (ಗುಣಗಳು) ಯಾವುವೆಲ್ಲಾ? ಚರ್ಚೆ, ನೆನಪಿನಲ್ಲುಳಿಯುವ ಲಿಸ್ಟ್ ತಯಾರಿಸುವುದು. ಅಧ್ಯಾಪಕನ ನೈಪುಣ್ಯಗಳನ್ನು ಅರಿತುಕೊಳ್ಳುವುದು.<br>■ ಅಧ್ಯಾಪಕ ನೈಪುಣ್ಯಗಳು – ಸೂಚಕವನ್ನು ಅಭಿವೃದ್ಧಿಪಡಿಸುವುದು – ಸೂಚಕವನ್ನುಪಯೋಗಿಸಿ ತರಗತಿಯನ್ನು ನಿರೀಕ್ಷಿಸಿ ಅಧ್ಯಾಪಕನ ನೈಪುಣ್ಯವನ್ನು ಮೌಲ್ಯನಿರ್ಣಯ ಮಾಡುವುದು.<br>■ ಮಾತುಗಾರಿಕೆಯ ಮೂಲಕ ಫಲಪ್ರದವಾಗಿ ಮಂಡಿಸಲಿರುವ ಮಾರ್ಗಗಳನ್ನು ಚರ್ಚೆಮಾಡಿ ಸಹಪಾಠಿಗಳ ಮಂಡನೆಗಳನ್ನು ಮೌಲ್ಯಮಾಪನ ನಡೆಸುವುದು.<br>■ ಕರಿಹಲಗೆ, ಚಾರ್ಟ್ ಎಂಬಿವುಗಳನ್ನು ಫಲಪ್ರದವಾಗಿ ಉಪಯೋಗಿಸಲಿಕ್ಕಿರುವ ವಿಧಾನಗಳನ್ನು ಕಂಡು ಹಿಡಿಯುವುದು.<br>■ ತನ್ನ ಹಾಗೂ ಸಹಪಾಠಿಗಳ ತರಗತಿಗಳ ವಿಡಿಯೋವನ್ನು ವಿಶ್ಲೇಷಿಸುವುದು. |
| • ಬೋಧನಾ ವಿಧಾನಗಳು, ತಂತ್ರಗಳು<br>- ಪ್ರೊಜೆಕ್ಟ್, ಸೆಮಿನಾರ್, ಸಂಭಾಷಣೆ<br>- ಗುಂಪು ಚರ್ಚೆ, ಪೇನಲ್ ಚರ್ಚೆ<br>- ಆಗಮನ ನಿಗಮನ ರೀತಿಗಳು<br>- ಹ್ಯೂಮನಿಸ್ಟಿಕ್ ವಿಧಾನಗಳು, ಕ್ರೀಡಾ ರೀತಿಗಳು<br>- ಅನ್ವೇಷಣಾತ್ಮಕ ರೀತಿ<br>- ಸಂಶೋಧನಾ ರೀತಿ, ಕಂಡುಹಿಡಿಯುವ ರೀತಿ<br>- ವ್ಯಾಖ್ಯಾನ ರೀತಿ, ಭಾಷಣ ರೀತಿ<br>- ವಿಶ್ಲೇಷಣಾ ನಿಗಮನ ರೀತಿಗಳು<br>- ಸಮಸ್ಯಾಪರಿಹಾರ ರೀತಿಗಳು<br>- ನಿರೀಕ್ಷಣೆ, ಪ್ರಯೋಗ | • ವೈವಿಧ್ಯಪೂರ್ಣವಾದ ಕಲಿಕಾಬೋಧನ ತಂತ್ರಗಳು ಇವೆಯೆಂದು ಮನವರಿಕೆ ಮಾಡುವುದು.<br>■ ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಉಪಯೋಗಿಸಲ್ಪಡುವ ವಿವಿಧ ಬೋಧನಾ ರೀತಿಗಳು/ತಂತ್ರಗಳ ಕುರಿತು ಚರ್ಚಿಸುವುದು.<br>■ ವಿವಿಧ ಬೋಧನಾ ಸಂದರ್ಭಗಳಿಗೆ ಯೋಗ್ಯವಾದ ಬೋಧನಾ ತಂತ್ರಗಳು ಯಾವುವೆಂದು ಗುರುತಿಸುವುದು.<br>▲ ಭಾಷಾ ವಿಷಯಗಳಿಗೂ ವಿಜ್ಞಾನ ವಿಷಯಗಳಿಗೂ ಉಪಯೋಗಿಸಲ್ಪಡುವ ತಂತ್ರಗಳು ಯಾವುವೆಲ್ಲಾ? ಯಾಕಾಗಿ?<br>■ ವಿವಿಧ ಬೋಧನಾ ವಿಧಾನಗಳನ್ನು ಅವಲಂಭಿಸಿರುವ ತರಗತಿಗಳು/ತರಗತಿಗಳ ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ವೀಕ್ಷಿಸುವುದು. |
| • ಕಲಿಕಾ ಬೋಧನಾ ಪ್ರಕ್ರಿಯೆಗಳು<br>- ವ್ಯತ್ಯಸ್ತ ಮಟ್ಟದಲ್ಲಿರುವ ಮಕ್ಕಳು<br>- ಪಠ್ಯ ವಸ್ತುಗಳಲ್ಲಿರುವ ವಿಷಯ ವೈವಿಧ್ಯ<br>- ಮಗುವಿನ ಮಾನಸಿಕ ಪ್ರಕ್ರಿಯೆಗಳು<br>• ವೈಜ್ಞಾನಿಕ ಹಂತ<br>• ಮನೋಭಾವದ ಮಟ್ಟ<br>• ಮಾನಸಿಕ ಮಟ್ಟ | • ವ್ಯತ್ಯಸ್ತ ಪ್ರಾಯದ ಮಕ್ಕಳ ಚಿಂತನಾಪ್ರಕ್ರಿಯೆಯು ಪಠ್ಯವಸ್ತುಗಳಲ್ಲಿನ ವಿಷಯ ಸ್ವಭಾವವನ್ನು ಪರಿಗಣಿಸಿದರೆ ಮಾತ್ರವೇ ಕಲಿಕಾ ಚಟುವಟಿಕೆಗಳನ್ನು ಸಿದ್ಧಗೊಳಿಸಬೇಕು ಎಂದು ತಿಳಿದುಕೊಳ್ಳುವುದು. |

| ವಿಷಯ | ವಿನಿಮಯ ರೀತಿಗಳು |
|---|---|
| • ತರಗತಿ ಕೋಣೆಯೊಳಗಿನ ಚಟುವಟಿಕೆಗಳು<br>- ಯೋಜನೆ<br>- ಮಂಡನೆ<br>- ಭಾಗವಹಿಸುವಿಕೆ<br>- ಎಲ್ಲರನ್ನೂ ಪರಿಗಣಿಸುವಿಕೆ<br>- ಯೋಗ್ಯವಾದ ಕಲಿಕಾ ಚಟುವಟಿಕೆಗಳನ್ನು ಆಯ್ಕೆಮಾಡುವುದು<br>- ನಿರಂತರ ಮೌಲ್ಯಮಾಪನ | ▲ ಕಲಿಕಾ ಭೋಧನಾ ಪ್ರಕ್ರಿಯೆಯಲ್ಲಿ ಮಕ್ಕಳ ಮಾನಸಿಕ ಪ್ರಕ್ರಿಯೆ ಹಾಗೂ ತರಗತಿ ಕೋಣೆ ಚಟುವಟಿಕೆಗಳಿಗೆ ಎಷ್ಟರ ಮಟ್ಟಿಗೆ ಪ್ರಾಧಾನ್ಯತೆ ಇದೆ.<br>■ ತರಗತಿಯನ್ನು ಸಂದರ್ಶಿಸಿ ಅಧ್ಯಾಪಕನ ಭಾಗವಹಿಸುವಿಕೆ ಮತ್ತು ಮಕ್ಕಳ ಪ್ರತಿಕ್ರಿಯೆಗಳನ್ನು ಸೂಚಕದ ಆಧಾರದಲ್ಲಿ ನಿರೀಕ್ಷಿಸಬೇಕು. |
| **b) Teacher talk**<br>**Subtopics**<br>Generating discussion, asking questions, eliciting response, giving instructions, giving feedback, engaging in informal talk with learners - Strategies to make teacher talk comprehensible:<br><br>prosodic features -<br><br>Phonetic symbols, - transcription minimal pairs- intonation - stress,syllabes pause, tone, rhythm and pitch Paralinguistic features - facial expression, eye contact, body language, posture - Organizing listening and speaking activities like presentation, storytelling, drama, choreography, discussion, speech, etc. | • Teacher educator presents video clipping of a couple of elementary English classes or takes student teachers to actual classroom contexts and asks them to analyze various components of teacher talk based on indicators developed through a whole class discussion to evaluate the quality of the talk in terms of pedagogy and language accuracy, variety and appropriacy.<br>Student teachers simulate simple classroom activities and reflect on their talk in terms of the above indicators on their own and by taking feedback from peers.<br>Teacher educator distributes worksheets developed by him/her which contain samples of instructions, feedback given by teachers, questions asked by teachers, etc. and ask student teachers refine them pedagogically and linguistically.<br>A theatre workshop for atleast three days can be attempted to familiarize student teachers with classroom theatre, choreography, radio drama, story telling, speech, etc. The service of theatre experts can be made use of for this.<br>Opportunities for listening to good speeches (from the website TED INDIA http://www.ted.com) can be provided and student teachers are encouraged to take part in lot of speaking activities like extempore speech, one minute speech, pick and talk, panel discussion, group discussion, debate, etc. Throughout the period of the D. Ed course<br>Student teachers simulate activities for developing speaking skills and reflect on their speaking ability based on indicators.<br>• Teacher educator distributes a list of commonly mispronounced words, words which have no correspondence between spelling and pronunciation and words which have different pronunciation for noun, verb and adjective. A discussion is initiated on how defective pronunciation hinders comprehension. Student teachers record disussion points in their reflective journals.<br>Student teachers compare the letter- sound relationship in Malayalam and English. They list the letters/letter clusters that indicate a particular sound. The sounds are then asked to be categorized.<br>Teacher educator introduces the phonetic symbols (IPA)- Student teachers are asked to prepare a list of minimal pairs, list phrases/sentences with assonance and alliteration, etc.- Dictionary referencing (using a talking dictionary) is assigned to make a list of words often mispronounced-Activities like looking at the transcription and saying the word and reading/listening to the word and transcribing, etc. are given.<br>Discussion on connected speech and prosodic features namely stress, syllables, pause, intonation and pitch - student teachers listen to different texts of connected speech - they engage themselves in reader's theatre and radio drama activities and self-assess and peer assess the presentations. |

| Content area | Method of transaction |
|---|---|
| **c) Reading**<br>**Subtopics**<br>Reading for comprehension and types of reading - Analytical and critical reading of different language discourses - Micro process of reading - Teaching reading to young learners - Addressing multilevel learners. | • Teacher educator distributes different texts such as stories, articles, poems, etc. and facilitates reading for comprehension, appreciation, personal response, going beyond the text and critical interpretation.<br>Student teachers visit lab school/ watch video clippings of processing reading in elementary English classroom and analyse the reading process in terms of pre-reading, while reading and post reading activities - reviews the comprehension questions given along with the reading texts - categorize analytical questions that promote higher order thinking skills such as prediction, relating to one's own experiences, establishing cause effect relationship, comparing and contrasting ideas/things, expressing author's purpose evaluating one's views etc.<br>Student teachers analyze different reading tasks in textbooks at elementary level and prepare a critical write-up on the processes of reading.<br>Student teachers analyze the reading activities given along with poems in the textbooks and compare and contrast the processes of reading and prepare a write-up on 'process of reading prose and poetry'.<br>Student teachers make presentation about the integration of reading and writing tasks as seen in different textbooks at the elementary level.<br>Student teachers prepare at least 10 reading cards suitable for elementary classes using simple stories, pictures and write-ups/captions/dialogues developed by them and simulate them and reflect on the pre-reading, while-reading and post-reading tasks they have developed based on indicators.<br>Student teachers prepare critical write up on the methods of teaching reading to the young learners and try them out. After the tryout, they are encouraged to record their reflections in the reflective journal. |
| **d) Improving writing skills**<br>**Subtopics**<br>Experiencing the process of writing, brainstorming, drafting, modifying, revising, editing - Identifying features of a paragraph: topic sentence, organization of ideas, cohesive devices and coherence - Experiencing writing different language discourses and identifying discourse features - | • Student teachers analyse the elementary level English textbooks and make a list of all the different language discourses presented in them as reading texts and writing tasks<br><br>Student teachers develop indicators for assessing different discourses with the help of the teacher educator and simulate writing tasks covering all major language discourses integrating with reading tasks. |

| Content area | Method of transaction |
|---|---|
| Teaching writing: verbal and visual inputs, controlled, guided and free writing - Mechanics of writing: capitalization and punctuation | Student teachers attempt each writing taskas personal responses to reading and then in groups modify, revise and edit them based on the indicators- groups present the discourses and peers assess them - teacher educator attempts a whole class editing process of the best presentation. Selecting the best presentation.<br>Teacher educator makes a presentation on features of a paragraph - distributes worksheets for the student teachers to identify topic sentence and cohesive devices.<br>Student teachers collect samples of different language discourses constructed by elementary level learners and analyze them sequentially. i.e., from very young learners' writing to class eight learners' writing and categorize the problems they find in the writing of the learners in areas of capitalization and punctuation, syntax, morphology and spelling mechanics of writing, etc.<br>Student teachers prepare a write-up on 'issues in writing at the elementary level learners of English and ways to overcome them'.<br>Student teachers are asked to develop writing tasks with texts/pictures supplied to them. |

## Suggested Reading


1. Miles Turnbull, Jennifer Dailey-O'Cain:
   First Language Use in Second and Foreign Language Learning (http://www.amazon.com/Language-Second-Foreign-Learning-Acquisition/dp/1847691951#reader_1847691951).
2. Lev S. Vygotsky: Thought and Language.
   (http://www.amazon.co.uk/Thought-Language-Lev-S-Vygotsky/dp/0262720108#reader_0262720108).
3. NCF 2005, Position Paper English, NCERT.
4. Grabe William Reading in a second language, Moving from theory to practice.
5. Cambridge publishers, 2008.

## 7.3.5. ಪರಿಸರ ವಿಜ್ಞಾನ ಕಲಿಕೆ

ಅಧ್ಯಾಪಕ ವಿದ್ಯಾರ್ಥಿಗಳಿಗೆ ಪರಿಸರ ವಿಜ್ಞಾನದ ಮೂಲ ಅರಿವನ್ನು ಮೂಡಿಸುವುದಕ್ಕಾಗಿ ಒಂದನೇ ಸೆಮಿಸ್ಟರಿನಲ್ಲಿ ಪರಿಸರ ಒಂದು ಪಾಠಪುಸ್ತಕ ಎಂಬ ಪೇಪರನ್ನು ಪರಿಚಯಿಸಲಾಗಿದೆ. ಅದರ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ.

### ಪ್ರಸಕ್ತಿ

ವಿದ್ಯಾರ್ಥಿಯು ಕಲಿಯುವ ಅತಿದೊಡ್ಡ ಪಾಠಪುಸ್ತಕವು ಅವನ ಪರಿಸರ ಮತ್ತು ಪ್ರಕೃತಿಯಾಗಿದೆ. ತನ್ನ ಸುತ್ತುಮುತ್ತಲಿನ ಯಾವುದೇ ವಿಷಯದ ಬಗ್ಗೆ ತಿಳಿದುಕೊಳ್ಳಲು ಅವರಲ್ಲಿ ಜಿಜ್ಞಾಸೆ ಮತ್ತು ಕುತೂಹಲಗಳಿರುವುದು. ತನ್ನ ಸುತ್ತುಮುತ್ತಲಿನ ಜಗತ್ತನ್ನು ಕುತೂಹಲದಿಂದ ವೀಕ್ಷಿಸಿ, ಕೇಳಿ, ಸ್ಪರ್ಶಿಸಿ ಅವನು ಪರಿಸರದ ಬಗ್ಗೆ ತಿಳಿದುಕೊಳ್ಳುವನು. ಪರಿಸರದೊಂದಿಗೆ ಅವನು ಆಶಯವನ್ನು ವಿನಿಮಯ ಮಾಡಿದಾಗ ಮೂಲ ಕಲಿಕಾ ಸಾಮರ್ಥ್ಯಗಳಾದ ನಿರೀಕ್ಷಣೆ, ವರ್ಗೀಕರಣ, ಅಳತೆ, ಆಶಯ ವಿನಿಮಯ, ನಿಗಮನದ ರೂಪೀಕರಣ, ಪ್ರತಿಕ್ರಿಯಾ ಸಾಮರ್ಥ್ಯ ಇತ್ಯಾದಿಗಳು ವಿಕಾಸ ಹೊಂದುವುದು. ಇದರ ಜೊತೆಗೆ ಕಿರು ಪ್ರಯೋಗಗಳನ್ನು ಮಾಡುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಸುವನು. ಇದರಿಂದಾಗಿ ಅವನಿಗೆ ಪರಿಸರವನ್ನು ಪ್ರೀತಿಸಲು, ನೆಲೆನಿಲ್ಲಿಸಲು, ಸಂರಕ್ಷಿಸಲು, ಪರಿಸರ ಸೌಹಾರ್ದ ಮನೋಭಾವನೆಯನ್ನು ಬೆಳೆಸಲು ಸಾಧ್ಯವಾಗುವುದು. ಸಹಜೀವಿಗಳನ್ನೂ ಸುತ್ತಲಿನ ಗಿಡ, ಮರ, ಬಳ್ಳಿಗಳನ್ನೂ ಪಕ್ಷಿ ಮೃಗಾದಿಗಳನ್ನೂ ಪ್ರೀತಿಯಿಂದ ನೋಡಲು ಅವನು ಕಲಿತುಕೊಳ್ಳುವನು. ತನ್ನ ಮನೆ, ಕುಟುಂಬ, ಊರು ಇತ್ಯಾದಿಗಳ ಬಗ್ಗೆ ಹೆಚ್ಚು ಅರಿವನ್ನು ಗಳಿಸಿಕೊಳ್ಳವನು. ಈ ಉದ್ದೇಶಗಳ ಕಡೆಗೆ ಪ್ರಾಥಮಿಕ ಹಂತದಲ್ಲಿ ಕಲಿಯುವ ಪ್ರತಿಯೊಂದು ಮಕ್ಕಳನ್ನು ಮುನ್ನಡೆಸುವ ನೈಪುಣ್ಯವನ್ನು ಅಧ್ಯಾಪಕ ವಿದ್ಯಾರ್ಥಿಯು ಗಳಿಸಿಕೊಳ್ಳಬೇಕು. ಇದಕ್ಕೆ ಸಹಾಯಕವಾದ ತಿಳುವಳಿಕೆ ಮತ್ತು ಅನುಭವಗಳನ್ನು ಅಧ್ಯಾಪಕ ವಿದ್ಯಾರ್ಥಿಗಳಿಗೆ ನೀಡಬೇಕು. D.Ed. Course ನ ಆರಂಭದ ಎರಡು ಸೆಮಿಸ್ಟರುಗಳಲ್ಲಿ ಅಧ್ಯಾಪಕ ವಿದ್ಯಾರ್ಥಿಗಳಿಗೆ ಮೇಲೆ ಸೂಚಿಸಿದ ಸಾಮರ್ಥ್ಯ ಮತ್ತು ನೈಪುಣ್ಯಗಳನ್ನು ಒದಗಿಸುವ ರೀತಿಯಲ್ಲಿ ಪರಿಸರ ವಿಜ್ಞಾನ ಪಠ್ಯಪದ್ಧತಿಯನ್ನು ತಯಾರಿಸಲಾಗಿದೆ.

### ಉದ್ದೇಶಗಳು

ಪರಿಸರ ವಿಜ್ಞಾನ ಕಲಿಕೆಯ ಅರ್ಥ, ವ್ಯಾಪ್ತಿ, ಪ್ರಾಧಾನ್ಯವನ್ನು ಅರಿತುಕೊಂಡು ಉತ್ತಮ ರೀತಿಯಲ್ಲಿ ಪರಿಸರದ ಅಧ್ಯಯನವನ್ನು ನಡೆಸುವುದಕ್ಕೆ ಅಧ್ಯಾಪಕ ವಿದ್ಯಾರ್ಥಿಗಳಿಗೆ ವಿವಿಧ ಸಾಮರ್ಥ್ಯಗಳನ್ನು ನೀಡಬೇಕಾಗಿದೆ. ಅವುಗಳನ್ನು ಕೆಳಗೆ ನೀಡಲಾಗಿದೆ.

- ಪರಿಸರ ವಿಜ್ಞಾನ ಕಲಿಕೆಯ ಉದ್ದೇಶಗಳಿಗೆ ಮತ್ತು ಪರಿಸರ ವಿಜ್ಞಾನ ಕಲಿಕೆಯ ಸಮೀಪನಕ್ಕೆ ಸಂಬಂಧಿಸಿ ಸ್ಪಷ್ಟವಾದ ತಿಳುವಳಿಕೆ ಮತ್ತು ದೃಷ್ಟಿಕೋನವನ್ನು ರೂಪೀಕರಿಸುವುದು.
- ಪರಿಸರ ವಿಜ್ಞಾನ ಕಲಿಕೆ ಸಂಯೋಜಿತ ಸ್ವಭಾವವನ್ನು ಅರಿತುಕೊಂಡು ಕಲಿಕೆದಾರನನ್ನು ಪರಿಗಣಿಸಿಕೊಂಡು ಗುಣಮಟ್ಟದ ಅಧ್ಯಾಪಕ ಸಾಮರ್ಥ್ಯವನ್ನು ಗಳಿಸಲು ಅಗತ್ಯವಾದ ತಿಳುವಳಿಕೆಗಳು, ನೈಪುಣ್ಯಗಳು, ಮನೋಭಾವಗಳು, ಮೌಲ್ಯಗಳು, ಸಾಮಾಜಿಕ ನೈಪುಣ್ಯಗಳು ಇತ್ಯಾದಿಗಳನ್ನು ಬೆಳಸಿಕೊಳ್ಳವುದು.
- ಪರಿಸರ ಎನ್ನುವ ವಿಶಾಲವಾದ ಪಾಠಪುಸ್ತಕದ ಅನಂತ ಸಾಧ್ಯತೆಗಳನ್ನು ತಿಳಿದು ಪರಿಸರದೊಂದಿಗೆ, ಪರಿಸರಕ್ಕಾಗಿ ಪರಿಸರ ವಿಜ್ಞಾನ ಕಲಿಕೆಯ ಉದ್ದೇಶಗಳನ್ನು ಅರಿತುಕೊಂಡು ಮಕ್ಕಳಲ್ಲಿ ಪರಿಸರಕ್ಕೆ ಸಂಬಂಧಿಸಿದ ಆಶಯಗಳು, ಪ್ರಕ್ರಿಯಾ ಸಾಮರ್ಥ್ಯಗಳು, ಪರಿಸರ ಸೌಹಾರ್ದಯುತ ಮನೋಭಾವ ಎಂಬಿವುಗಳ ರೂಪೀಕರಣಕ್ಕೆ ಅಗತ್ಯವಾದ ಕಲಿಕಾ ಸಾಮರ್ಥ್ಯವನ್ನುಗಳಿಸುವುದು.
- ಮಕ್ಕಳ ವಿಕಾಸದ ಹಂತಗಳಲ್ಲಿ ಸುತ್ತುಮುತ್ತಲಿಗೂ ಪ್ರಕೃತಿಗೂ ಇರುವ ಪ್ರಭಾವ ಮನೋವಿಜ್ಞಾನ ಪರವಾದ ಸಿದ್ಧಾಂತಗಳ ದೃಷ್ಟಿಕೋನದಲ್ಲಿ ವಿಶ್ಲೇಷಣೆ ಮಾಡಲೂ ಅದಕ್ಕನುಸಾರವಾಗಿ ಕಲಿಕಾ ತಂತ್ರಗಳನ್ನು ರೂಪೀಕರಿಸಲು ಮತ್ತು ಜಾರಿಗೊಳಿಸಲು ಅಗತ್ಯವಾದ ಸಾಮರ್ಥ್ಯವನ್ನು ಗಳಿಸುವುದು.
- 5ನೇ ತರಗತಿಯ ವರೆಗಿನ ಪರಿಸರ ವಿಜ್ಞಾನ ಪಠ್ಯಪದ್ಧತಿಯನ್ನು ವಿಶ್ಲೇಷಣೆ ಮಾಡಿ ಪಠ್ಯಪದ್ಧತಿಯ ವಿಶೇಷತೆಗಳನ್ನು (ಸಂಯೋಜಿತ ಸ್ವಭಾವ ಮತ್ತು ಚಕ್ರಾವರ್ತನ) ಆರ್ಜಿಸಿಕೊಳ್ಳವುದು.
- ಪರಿಸರ ವಿಜ್ಞಾನ ಪಠ್ಯಪುಸ್ತಕಗಳನ್ನು ವಿಶ್ಲೇಷಣೆಮಾಡಿ 5ನೆಯ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಲಭಿಸಬೇಕಾದ ಆಶಯಗಳು, ತಿಳುವಳಿಕೆಗಳು ಸಾಮಾಜಿಕ ಜೀವನ ನೈಪುಣ್ಯಗಳು ಮನೋಭಾವಗಳು ಇತ್ಯಾದಿಗಳಿಗೆ ಸಂಬಂಧಿಸಿ ಸಮಗ್ರವಾದ ತಿಳುವಳಿಕೆಯನ್ನು ಗಳಿಸುವುದು.
- ಪರಿಸರ ವಿಜ್ಞಾನ ಪಠ್ಯಪದ್ಧತಿಯನ್ನು ವಿಶ್ಲೇಷಣೆ ಮಾಡಿ ವಾರ್ಷಿಕ ಯೋಜನೆ, ಕಲಿಕಾಶಾಸ್ತ್ರಪರವಾದ ಅರಿವು, ದೈನಿಕ ಯೋಜನೆ ಇತ್ಯಾದಿಗಳನ್ನು ನಡೆಸಲು ಸಾಮರ್ಥ್ಯ ಗಳಿಸುವುದು.

- ಪರಿಸರ ವಿಜ್ಞಾನವನ್ನು ಸ್ವಾರಸ್ಯಕರ ಮತ್ತು ಅರ್ಥಪೂರ್ಣ ಗೊಳಿಸುವುದಕ್ಕೆ ಅಗತ್ಯವಾದ ಕಲಿಕೋಪಕರಣಗಳನ್ನು ಕಂಡುಹಿಡಿಯಲು ಮತ್ತು ಉತ್ತಮಪಡಿಸಿ ಉಪಯೋಗಿಸಲು ಬೇಕಾದ ನೈಪುಣ್ಯವನ್ನು ಗಳಿಸುವುದು.
- ಫಲಪ್ರದವಾದ ಪರಿಸರ ವಿಜ್ಞಾನ ತರಗತಿಗೆ ಸಂಬಂಧಿಸಿದ ದೃಷ್ಟಿಕೋನಕ್ಕೆ ಅನುಸಾರವಾಗಿ ತರಗತಿಯ ಯೋಜನೆಗಳನ್ನು ನಡೆಸಿ ಕಲಿಕಾನುಭವಗಳನ್ನು ಸೃಷ್ಟಿಸಲು ಮತ್ತು ಮೌಲ್ಯ ಮಾಪನವನ್ನು ನಡೆಸಲು.
- ಪರಿಸರ ವಿಜ್ಞಾನದ ಮೌಲ್ಯಮಾಪನ, ಸಮೀಪನ, ಬಳಕೆ, ಮೌಲ್ಯ ನಿರ್ಣಯ ವಿಧಗಳು, ಗ್ರೇಡಿಂಗ್ ಇತ್ಯಾದಿಗಳಿಗೆ ಸಂಬಂಧಿಸಿದ ಸಮಗ್ರವಾದ ತಿಳುವಳಿಕೆಗಳನ್ನು ಗಳಿಸಿಕೊಳ್ಳುವುದು ಮತ್ತು ಅಳವಡಿಸಿಕೊಳ್ಳುವುದು.

| ಪೇಪರಿನ ಸಂಖ್ಯೆ | ಪೇಪರಿನ ಹೆಸರು |
|---|---|
| $S_1.P_5$ | **ಪರಿಸರ ಒಂದು ಪಾಠಪುಸ್ತಕ** |

| | | |
|---|---|---|
| ಒಟ್ಟು ಅಂಕಗಳು | : | 20 (ನಿರಂತರ ಮೌಲ್ಯಮಾಪನ 20 ಮಾತ್ರ) |
| ಒಟ್ಟು ಸೆಮೆಸ್ಟರ್ ಸಮಯ | : | 65 ಗಂಟೆಗಳು |
| ಒಟ್ಟು ವಾರದಲ್ಲಿ ಸಮಯ | : | 3 ಗಂಟೆಗಳು |

## ಮುನ್ನುಡಿ

ಪರಿಸರದ ಕುರಿತಾಗಿ ಪರಿಸರದೊಂದಿಗೆ, ಪರಿಸರಕ್ಕಾಗಿ ಇರುವ ಅಧ್ಯಯನವೇ ಪರಿಸರ ವಿಜ್ಞಾನ ಎಂದು ತಿಳಿದುಕೊಳ್ಳಬಹುದು. ಬೆಳೆಯುವ ಮಗು ತನ್ನ ಪರಿಸರದೊಂದಿಗೆ ಅತಿ ಹೆಚ್ಚು ಬೆರೆತುಕೊಳ್ಳುವನು. ತನ್ನ ಪಂಚೇಂದ್ರಿಯಗಳ ಮೂಲಕ ಪರಿಸರವನ್ನು ಅರಿತುಕೊಳ್ಳುವುದರೊಂದಿಗೆ ಮಗುವಿನಲ್ಲಿ ವೈಜ್ಞಾನಿಕ ವಿಕಾಸವು ನಡೆಯುವುದು. ಮಗುವಿಗೆ ತನ್ನ ಪರಿಸರದ ಸೌಂದರ್ಯ ಮತ್ತು ವೈವಿಧ್ಯತೆಯನ್ನು ಆಸ್ವಾದಿಸಲು ಸಾಧ್ಯವಾಗಬೇಕು. ವಿದ್ಯಾರ್ಥಿ ಪರಿಸರಕ್ಕೆ ಸಂಬಂಧಿಸಿದ ಆಶಯಗಳನ್ನು ಗಳಿಸುವುದರೊಂದಿಗೆ ಪ್ರಕ್ರಿಯಾ ಸಾಮರ್ಥ್ಯಗಳಾದ ನಿರೀಕ್ಷಣೆ, ವರ್ಗೀಕರಣ, ಅಳತೆ, ಆಶಯ ವಿನಿಮಯ, ಊಹನೆ, ಪ್ರಕ್ರಿಯಾ ಸಾಮರ್ಥ್ಯ, ನಿಗಮನ ರೂಪೀಕರಣ ಇತ್ಯಾದಿಗಳನ್ನು ವಿಕಾಸಗೊಳಿಸಬೇಕಾಗಿದೆ. ಪ್ರೊಜೆಕ್ಟ್, ಲಘು ಪ್ರಯೋಗಗಳು ಇತ್ಯಾದಿಗಳಲ್ಲಿ ಪಾಲ್ಗೊಳ್ಳುವ ಮೂಲಕ ವಿವಿಧ ಸಂಯೋಜನಾ ಸಾಮರ್ಥ್ಯಗಳು ವಿಕಾಸಗೊಳ್ಳುವುದು. ತನ್ನ ಪರಿಸರವನ್ನು ಪ್ರೀತಿಸಲೂ ತನ್ನದೆಂಬ ಮನೋಭಾವನೆಯನ್ನು ಬೆಳೆಸಲೂ ಅಗತ್ಯವಾದ ಸೌಹಾರ್ದ ಮನೋಭಾವವನ್ನು ಮಕ್ಕಳಲ್ಲಿ ರೂಪುಗೊಳಿಸುವುದು. ಮಾನವನ ಅಸ್ತಿತ್ವಕ್ಕೆ ಪರಿಸರ ಮತ್ತು ಪ್ರಕೃತಿಯ ಅಸ್ತಿತ್ವವು ಅತೀ ಅಗತ್ಯ ಎಂಬ ವಾಸ್ತವಾಂಶವನ್ನು ವಿದ್ಯಾರ್ಥಿಗಳು ಅರಿತುಕೊಳ್ಳಲು ಸಾಧ್ಯವಾಗಬೇಕು. ಈ ರೀತಿಯಲ್ಲಿ ಮಗುವಿನ ವಿಕಾಸದ ವಿವಿಧ ಹಂತಗಳಲ್ಲಿ ಸುತ್ತುಮುತ್ತಲಿನ ಪರಿಸರ ಮತ್ತು ಪ್ರಕೃತಿಯ ಪ್ರಭಾವವನ್ನು ಅರಿತುಕೊಂಡು ಪರಿಸರ ವಿಜ್ಞಾನ ಕಲಿಕೆಯ ಪ್ರಾಧಾನ್ಯತೆಯನ್ನು ರಸವತ್ತಾಗಿಸಬೇಕು. ಇದಕ್ಕೆ ಸಹಾಯಕವಾದ ತಿಳುವಳಿಕೆಗಳನ್ನು ಮತ್ತು ಅನುಭವಗಳನ್ನು ಅಧ್ಯಾಪಕ ವಿದ್ಯಾರ್ಥಿಗಳಿಗೆ ನೀಡಿರಬೇಕು. ಮಗುವಿನ ಪರಿಸರವನ್ನು ಪರಿಗಣಿಸಿಕೊಂಡು ನಿರೀಕ್ಷಣೆ, ಲಘು ಪ್ರೊಜೆಕ್ಟ್, ಸಂಗ್ರಹ, ಲಘು ಪ್ರಯೋಗಗಳು , ತಯಾರಿಕೆ, ತರಗತಿಯ ಹೊರಗಿನ ಕಲಿಕೆ ಇತ್ಯಾದಿ ಪರಿಸರ ವಿಜ್ಞಾನ ಕಲಿಕಾ ತಂತ್ರಗಳನ್ನು ಫಲಪ್ರದವಾಗಿ ನಿರ್ವಹಿಸಲು ಅಧ್ಯಾಪಕ ವಿದ್ಯಾರ್ಥಿಗಳು ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. D.Ed. ಕೋರ್ಸಿನ ಮೊದಲ ಎರಡು ಸೆಮೆಸ್ಟರ್‌ಗಳಲ್ಲಿ ವಿದ್ಯಾರ್ಥಿಗಳು ಆರ್ಜಿಸಿಕೊಳ್ಳಬೇಕಾದ ಪರಿಸರ ವಿಜ್ಞಾನ ಕಲಿಕಾ ಆಶಯಗಳು, ಅನುಭವಗಳು, ಕಲಿಕಾ ನೈಪುಣ್ಯಗಳು ಮೊದಲಾದುವುಗಳು ಪಾಠಪುಸ್ತಕದಲ್ಲಿ ಒಳಗೊಂಡಿವೆ. ಅಧ್ಯಾಪಕ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ಖಾತರಿಗೊಳಿಸಿ ಅವರ ನಿರ್ದಿಷ್ಟ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಲು ಸೂಕ್ತವಾದ ಹೆಚ್ಚಿನ ಕಲಿಕಾ ಚಟುವಟಿಕೆಗಳನ್ನು ಕಂಡುಕೊಂಡು ಕಲಿಕಾ ತರಗತಿಯನ್ನು ಉತ್ತಮಪಡಿಸಬೇಕು.

### ವಿಷಯಗಳು

**ಯೂನಿಟ್ 1 : ಪರಿಸರ ವಿಜ್ಞಾನ – ಅರ್ಥ ಮತ್ತು ವ್ಯಾಪ್ತಿ**
(ಸಮಯ: 25 ಗಂಟೆಗಳು)

**ಯೂನಿಟ್ 2 : ಪರಿಸರ ಎಂಬ ಪಾಠಪುಸ್ತಕ**
(ಸಮಯ: 25 ಗಂಟೆಗಳು)

**ಯೂನಿಟ್ 3 : ಪರಿಸರ ವಿಜ್ಞಾನ ಪಠ್ಯಪದ್ಧತಿ–ಸಮೀಪನ**
(ಸಮಯ: 15 ಗಂಟೆಗಳು)

## $S_1.P_5$ ಪರಿಸರ ಒಂದು ಪಾಠಪುಸ್ತಕ – ಯೂನಿಟಿನ ವಿವರಣೆಗಳು

| ವಿಷಯ | ವಿನಿಮಯ ರೀತಿ |
|---|---|
| **ಯೂನಿಟ್ 1 : ಪರಿಸರ ವಿಜ್ಞಾನ – ಅರ್ಥ ಮತ್ತು ವ್ಯಾಪ್ತಿ**<br>(ಸಮಯ: 25 ಗಂಟೆಗಳು)<br>**1.1 ಪರಿಸರ ವಿಜ್ಞಾನ –ಹಂತಗಳು**<br>• ಪರಿಸರಕ್ಕಾಗಿ<br>• ಪರಿಸರದೊಂದಿಗೆ<br>• ಪರಿಸರದ ಕುರಿತು | • ಪರಿಸರ ವಿಜ್ಞಾನದ ಸ್ವಭಾವ, ಅರ್ಥ, ವ್ಯಾಪ್ತಿ, ಪರಿಸರ ಅಧ್ಯಯನದ ವಿವಿಧ ಹಂತಗಳು ಇತ್ಯಾದಿಗಳನ್ನು ತಿಳಿದುಕೊಳ್ಳುವುದು. ಪರಿಸರ ಅದ್ಯಯನದ ಪ್ರಾಧಾನ್ಯತೆಯನ್ನು ಅರ್ಥೈಸಿಕೊಳ್ಳವರು.<br>■ **ನಿರೀಕ್ಷಣೆ** – ಕ್ಯಾಂಪಸ್‌ನಲ್ಲಿರುವ ಒಂದು ಜೀವಗೋಲ, ಆಹಾರ ಶೃಂಖಲೆ, ಆಹಾರ ಸಂಬಂಧಗಳು, ಆಹಾರ ಜಾಲ ಇತ್ಯಾದಿಗಳನ್ನು ದಾಖಲಿಸುವುದು.<br>• ಜೀವಗೋಲವನ್ನು ಉಳಿಸುವ ಘಟಕಗಳು ಯಾವುದೆಂದು ಕಂಡುಕೊಳ್ಳುವುದು. ನಿರೀಕ್ಷಣೆಯ ನಂತರ ದಾಖಲಿಸಿ ಚರ್ಚೆ ನಡೆಸುವುದು.<br>• ಪರಿಸರಕ್ಕೆ ಸಂಬಂಧಿಸಿ ಗಳಿಸಿದ ಆಶಯಗಳು ಯಾವುವು?<br>• ಈ ಮಾಹಿತಿಗಳು ಹೇಗೆ ಲಭಿಸಿದುವು?<br>• ಜೀವಗೋಲವನ್ನು ತನ್ನದೆಂಬ ಭಾವನೆಯಿಂದ ನೆಲೆನಿಲ್ಲಿಸುವ ಅಗತ್ಯವೇನು?<br>▲ ಈ ರೀತಿಯ ಕಲಿಕಾ ಚಟುವಟಿಕೆಯನ್ನು ತರಗತಿಯಲ್ಲಿ ನಡೆಸುವಾಗ ಅಧ್ಯಾಪಕರು ಯಾವ ರೀತಿಯ ತಯಾರಿಯನ್ನು ನಡೆಸಬೇಕು? |
| **1.2 ಪರಿಸರ ವಿಜ್ಞಾನ ಕಲಿಕಾ ಶಾಖೆ–ಬೆಳವಣಿಗೆಯ ಹಂತಗಳು**<br>• ವಿಜ್ಞಾನ, ಸಮಾಜ ವಿಜ್ಞಾನ, ಪರಿಸರ ವಿಜ್ಞಾನ ಇತ್ಯಾದಿಗಳು ಪ್ರತ್ಯೇಕ, ಶಾಖೆಗಳಾದವು.<br>• ಪರಿಸರ ವಿಜ್ಞಾನ – ಸಂಯೋಜಿತ ದೃಷ್ಟಿಕೋನ | • ಪರಿಸರ ವಿಜ್ಞಾನ ಪುಸ್ತಕದ ಸಂಯೋಜಿತ ಸ್ವಭಾವವನ್ನು ವಿಶ್ಲೇಷಣೆ ಮಾಡಿ ಒಳಿತುಗಳನ್ನು ಕಂಡುಹಿಡಿಯುವರು.<br>■ ಪ್ರಾಥಮಿಕ ಹಂತದಲ್ಲಿ ಪ್ರಾಚೀನ ವಿಜ್ಞಾನ, ಸಮಾಜ ವಿಜ್ಞಾನ, ಪರಿಸರ ವಿಜ್ಞಾನ ಇತ್ಯಾದಿ ಪಾಠಪುಸ್ತಕಗಳನ್ನು ಓದಿ ವಿಶ್ಲೇಷಣಾ ಟಿಪ್ಪಣಿಯನ್ನು ತಯಾರಿಸುವರು.<br>▲ 'ಪರಿಸರ ವಿಜ್ಞಾನ ಪುಸ್ತಕವನ್ನು ಅರ್ಥೈಸಿಕೊಳ್ಳುವ ಮೂಲಕ ಕಲಿಕೆ ಹೆಚ್ಚು ಫಲಪ್ರದವಾಗುವುದು' ಈ ಹೇಳಿಕೆಯನ್ನು ವಿಶ್ಲೇಷಿಸಿರಿ. |
| **1.3 ಪರಿಸರ, ಪರಿಸರ ವ್ಯವಸ್ಥೆ**<br>• ಪ್ರಕೃತಿದತ್ತವಾದ ಪರಿಸರ<br>• ಸೌರವ್ಯೂಹ, ಪ್ರಾಕೃತಿಕ ಸಂಪನ್ಮೂಲಗಳು, ಪ್ರಾಕೃತಿಕ ವಿದ್ಯಮಾನಗಳು<br>• ಮಾನವ ನಿರ್ಮಿತ ಪರಿಸರ<br>• ಮನೆ, ವಾಹನಗಳು, ಉಡುಪು<br>• ಸಾಮಾಜಿಕ ಪರಿಸರ<br>• ಭಾಷೆ, ಆಚಾರ ಅನುಷ್ಠಾನಗಳು, ಉತ್ಸವ, ಸಂಸ್ಕೃತಿ<br>• ಪರಿಸರ ಎಂದರೇನು?<br>ಮಗುವಿನ ಸುತ್ತುಮುತ್ತಲಿನ ಸ್ಥಿತಿಗತಿ | • ಪ್ರಕೃತಿದತ್ತವಾದ ಪರಿಸರ, ಮಾನವ ನಿರ್ಮಿತ ಪರಿಸರ, ಸಾಮಾಜಿಕ ಪರಿಸರ ಎಂಬಿವುಗಳ ನಡುವಿನ ಪರಸ್ಪರ ಸಂಬಂಧಗಳನ್ನು ವಿಶ್ಲೇಷಣೆ ಮಾಡಿ ಪ್ರತಿಯೊಂದರ ರಚನೆ, ಪ್ರಸಕ್ತಿ ಮತ್ತು ಪ್ರಾಧಾನ್ಯವನ್ನು ತಿಳಿಯುವುದು.<br>■ ಪರಿಸರ ಮತ್ತು ಪರಿಸರ ವ್ಯವಸ್ಥೆಯ ಕುರಿತಾಗಿ ತರಗತಿಯಲ್ಲಿ ಸಾಮಾನ್ಯ ಚರ್ಚೆ ನಡೆಸುವುದು, ಪರಿಸರ ವ್ಯವಸ್ಥೆಯ ಆಶಯವನ್ನು ಭೂಪಟ, ವೆನ್ ಡಯಾಗ್ರಾಂನ ಮೂಲಕ ತಿಳಿಸುವುದು.<br>• ಪರಿಸರ ವ್ಯವಸ್ಥೆಯ ರಚನೆ, ವಿವಿಧ ಘಟಕಗಳ ಪರಸ್ಪರ ಸಂಬಂಧಗಳನ್ನು ಕಂಡುಕೊಂಡು concept map ತಯಾರಿಸಿ ಆಶಯವನ್ನು ವಿಪುಲೀಕರಿಸಬೇಕು.<br>▲ ಮಾನವ ನಿರ್ಮಿತ ಪರಿಸರವು ಪ್ರಕೃತಿ ಮತ್ತು ಸಮಾಜದ ಮೇಲೆ ಹೇಗೆ ಪ್ರಭಾವವನ್ನು ಬೀರುವುದು.<br>▲ ಮಾನವನ ಹಸ್ತಕ್ಷೇಪವು ಪ್ರಕೃತಿದತ್ತವಾದ ಪರಿಸರದ ಮೇಲೆ ಉಂಟುಮಾಡುವ ದುಷ್ಪರಿಣಾಮಗಳು ಯಾವುವು? |

| ವಿಷಯ | ವಿನಿಮಯ |
|---|---|
| • ಪರಿಸರ ವ್ಯವಸ್ಥೆ (Eco system) ಎಂದರೇನು?<br>ಜೀವಿಗಳು ಮತ್ತು ಪರಿಸರ ನಡುವಿನ ಪರಸ್ಪರ ಸಂಬಂಧವು ಪರಿಸರವಾಗಿದೆ. | ▲ ಮಾನವ ನಿರ್ಮಿತ ಪರಿಸರದ ವಿಕಾಸದ ಮೂಲಕ (ಉದಾ: ವಾಹನ ದಟ್ಟಣೆ, ವಸತಿ ಸಮುಚ್ಛಯಗಳು, ಕೈಗಾರಿಕೆಗಳು) ಪ್ರಕೃತಿದತ್ತ ಪರಿಸರದ ಮೇಲೆ ಉಂಟಾಗುವ ಸಮಸ್ಯೆಗಳನ್ನು (ಉದಾ: ತ್ಯಾಜ್ಯಗಳು, E - ವೇಸ್ಟ್ ಅಣುಮಾಲಿನ್ಯ) ಕಂಡುಕೊಳ್ಳುವುದು. |
| **1.4 ಪರಿಸರ ವಿಜ್ಞಾನ ಮತ್ತು ಸುಸ್ಥಿರ ಅಭಿವೃದ್ಧಿ**<br>■ ಸುಸ್ಥಿರ ಅಭಿವೃದ್ಧಿ – ದೃಷ್ಟಿಕೋನ<br>• ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು<br>• ಎಲ್ಲರಿಗೂ ಆಹಾರ, ಆರೋಗ್ಯ – ವಿದ್ಯಾಭ್ಯಾಸ ಉದ್ಯೋಗ ವಸತಿ<br>• ಪ್ರಕೃತಿಯ ಸಂರಕ್ಷಣೆಯೊಂದಿಗೆ ಪ್ರಾಕೃತಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದು<br>• ಸಂಪನ್ಮೂಲಗಳ ಯುಕ್ತಿಪೂರ್ವ ವಿನಿಯೋಗ<br>• ಕೃಷಿ, ಸಂಗ್ರಹ, ಉತ್ಪಾದನೆ ಇತ್ಯಾದಿಗಳಿಗೆ ನೂತನ ವೈಜ್ಞಾನಿಕ ಮಾರ್ಗಗಳುನ್ನು ಅವಲಂಬಿಸುವುದು.<br>• ಮಲಿನೀಕರಣದಂತಹ ಪರಿಸರ ಸಮಸ್ಯೆಗಳನ್ನು ಪರಿಹರಿಸುವುದು. | ■ ಸೆಮಿನಾರ್: 'ಸುಸ್ಥಿರ ಅಭಿವೃದ್ಧಿ – ಮಾನವ ಕಲ್ಯಾಣಕ್ಕೆ ಮತ್ತು ಪ್ರಕೃತಿಯ ಅಸ್ತಿತ್ವಕ್ಕೆ'<br>▲ ಪ್ರಕೃತಿ ಸಂಕ್ಷರಣೆಯನ್ನು ಖಾತರಿಪಡಿಸಿಕೊಂಡು ಆಧುನಿಕ ತಾಂತ್ರಿಕತೆಯನ್ನು ಬಳಸಿಕೊಂಡು ಹೇಗೆ ಅಭಿವೃದ್ಧಿಯನ್ನು ಸಾಧಿಸಬಹುದು?<br>• ಸೆಮಿನಾರ್‌ನ್ನು ಮೌಲ್ಯಮಾಪನ ಮಾಡುವುದು.<br>▲ ಭಾರತದ ಅದರಲ್ಲಿಯೂ ಕೇರಳದ ಸುಸ್ಥಿರ ಅಭಿವೃದ್ಧಿಯು ಪ್ರಧಾನವಾಗಿ ಕೃಷಿ ಉತ್ಪಾದನೆಗಳನ್ನು ಅವಲಂಬಿಸಿದೆ! ಈ ಹೇಳಿಕೆಯನ್ನು ಅವಲೋಕಿಸಿರಿ. |
| **1.5 ನನ್ನ ಪರಿಸರ**<br>• ತನ್ನ ಸುತ್ತಮುತ್ತು<br>• ಮನೆ, ಕುಟುಂಬ, ಸಮಾಜ<br>• ಗ್ರಾಮವನ್ನು ತಿಳಿಯುವುದು, ಚರಿತ್ರೆ, ಆಚರಣೆ ಇತ್ಯಾದಿಗಳು<br>• ಊರನ್ನು ತಿಳಿದುಕೊಳ್ಳಲು – ಸಂಸ್ಕೃತಿ, ಚರಿತ್ರೆ, ಸಂಪನ್ಮೂಲಗಳು, ಕೃಷಿ ಇತ್ಯಾದಿಗಳು<br>• ಸಹಜೀವನ – ಮನುಷ್ಯ ಸಂಬಂಧಗಳು<br>• ಪಕ್ಷಿ ಮೃಗಾದಿಗಳು, ಪ್ರಾಣಿಗಳು, ಸಸ್ಯಗಳು, ಮರಗಳು ಇತ್ಯಾದಿ<br>• ಪ್ರಾಕೃತಿಕ ಸಂಪನ್ಮೂಲಗಳು<br>• ಪ್ರಾಕೃತಿಕ ವೈವಿಧ್ಯವನ್ನು ಆಸ್ವಾದಿಸುವುದು, ಸಂರಕ್ಷಣೆ | ▲ "ಮಾನವ ಮತ್ತು ಸಾಮಜಿಕ ಪರಿಸರ ವ್ಯವಸ್ಥೆಯ ನಡುವಿನ ಪರಸ್ಪರ ಸಂಬಂಧವು ಪರಿಸರದ ಅಸ್ತಿತ್ವಕ್ಕೆ ಅತ್ಯಗತ್ಯವಾಗಿದೆ. ಈ ಹೇಳಿಕೆಯನ್ನು ವಿಶ್ಲೇಷಿಸಿರಿ.<br>■ ಪ್ರಾದೇಶಿಕ ಸಂಪನ್ಮೂಲಗಳ ಭೂಪಟ (ಜೀವಜಾಲಗಳನ್ನು ಒಳಗೊಂಡು) ತಯಾರಿಸುವುದು (ಸಂದರ್ಶನ, ನಿರೀಕ್ಷಣೆ, ಆಕರಗ್ರಂಥಗಳು)<br>• ಪ್ರಾದೇಶಿಕ ಸಂಪನ್ಮೂಲಗಳ ಭೂಪಟದಲ್ಲಿ ಒಳಗೊಂಡ ಆಶಯಗಳು ಯಾವುವು?<br>• ಪರಿಸರ ವಿಜ್ಞಾನ ತರಗತಿಯಲ್ಲಿ ಪ್ರಾದೇಶಿಕ ಸಂಪನ್ಮೂಲ ಭೂಪಟದ ಪ್ರಯೋಜನವನ್ನು ಹೇಗೆ ಪಡೆದುಕೊಳ್ಳಬಹುದು?<br>• 'ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಮಾನವನ ಅಸ್ತಿತ್ವ' ಲಘು ಟಿಪ್ಪಣಿ ತಯಾರಿ.<br>■ ಒಂದು ಪ್ರಾದೇಶಿಕ ಪರಿಸರ ಸ್ವಂತಿಕೆಯೊಂದಿಗೆ ನೆಲೆನಿಲ್ಲಲು ನಾವು ಗಮನಿಸಬೇಕಾದ ಪ್ರಧಾನ ಅಂಶಗಳು ಯಾವುವು? |
| **1.6 ಪರಿಸರ ಸೌಹಾರ್ದ ಮನೋಭಾವ**<br>• ಮಾನವರಾಶಿಯ ಅಭಿವೃದ್ಧಿಯಲ್ಲಿ ಪರಿಸರದ ಪಾತ್ರ<br>• ವ್ಯಕ್ತಿತ್ವ ನಿರ್ಮಾಣದಲ್ಲಿ ಪರಿಸರದ ಪ್ರಭಾವ<br>• ಪರಿಸರ ಸಂರಕ್ಷಣಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮನೋಭಾವ | ■ ಒಂದು ಸ್ಥಳೀಯ ಪರಿಸರ ಸಮಸ್ಯೆ (ಕುಡಿಯುವ ನೀರಿನ ಕೊರತೆ, ಸಾಂಕ್ರಾಮಿಕ ರೋಗಗಳು) ಕಂಡುಕೊಳ್ಳುವುದು. ಅದಕ್ಕೆ ಕಾರಣವಾದ ಸನ್ನಿವೇಶಗಳು/ ಪರಿಹಾರ ಮಾರ್ಗಗಳು, ಮಾಹಿತಿ ಕಾರ್ಯಕ್ರಮಗಳು (ಲಘು ಪ್ರೊಜೆಕ್ಟ್) ಪ್ರಾದೇಶಿಕ ಸಂಪನ್ಮೂಲ ಭೂಪಟ, ಪ್ರೊಜೆಕ್ಟ್ ಕೈಗೊಂಡು ಮುಂದುವರಿದ ಚಟುವಟಿಕೆಗಳನ್ನು ಮೌಲ್ಯಮಪನ ಮಾಡಬೇಕು.<br>■ ಪರಿಸರ ಸಂಬಂಧಿ ಸಮಸ್ಯೆಗಳ ಕುರಿತಾದ ಕ್ಲಿಪ್ಪಿಂಗ್‌ನ್ನು ತೋರಿಸುವುದು. ಚರ್ಚೆ ನಡೆಸುವುದು. |

| ವಿಷಯ | ವಿನಿಮಯ |
|---|---|
| • ಎಲ್ಲವನ್ನೂ ಸ್ನೇಹದಿಂದ ನೋಡಲು, ಉಳಿಸಲು, ಸಂರಕ್ಷಿಸಲು.<br>• ಪರಿಸರ ಎದುರಿಸುವ ಸಮಸ್ಯೆಗಳನ್ನು ವಿಶ್ಲೇಷಿಸುವುದು, ಸಮಸ್ಯೆಗಳಲ್ಲಿ ಪಾಲ್ಗೊಳ್ಳಲು, ನಿಲುವು ಸ್ವೀಕರಿಸಲು, ಪರಿಹರಿಸಲು.<br>• ಸಮಾಜಕ್ಕೆ ಸೇರಿಕೊಳ್ಳಲು, ಪ್ರತಿಕ್ರಿಯಿಸಲು.<br>• ಹಕ್ಕುಗಳನ್ನು ಅರಿತುಕೊಂಡು ಜವಾಬ್ದಾರಿಗಳನ್ನು ನಿರ್ವಹಿಸಲು<br>• ನಾನು ನನ್ನ ಪರಿಸರವೂ. | ▲ ಜೈವಿಕ ಪರಿಸರ ಮತ್ತು ಸಾಮಾಜಿಕ ಪರಿಸರವನ್ನು ಸಂರಕ್ಷಿಸುವ ಮೂಲಕ ಹೇಗೆ ಅಭಿವೃದ್ಧಿಯನ್ನು ಸಾಧಿಸಬಹುದು?<br>▲ ಮಕ್ಕಳಲ್ಲಿ ಪರಿಸರ ಸೌಂದರ್ಯ ಮನೋಭಾವನೆಯನ್ನು ಬೆಳೆಸಲು ಅಧ್ಯಾಪಕನೆಂಬ ನೆಲೆಯಲ್ಲಿ ಯಾವೆಲ್ಲಾ ಕಾರ್ಯಕ್ರಮಗಳನ್ನು ನಡೆಸಬಹುದು?<br>■ ಪರಿಸರ ಸಂರಕ್ಷಣೆಗೆ ಪ್ರಾಧಾನ್ಯವನ್ನು ನೀಡುವ ಕಲಿಕಾ ಉಪಾದಿಗಳನ್ನು ತಯಾರಿಸುವುದು. |

| ವಿಷಯ | ವಿನಿಮಯ |
|---|---|
| **ಯೂನಿಟ್ 2 : ಪರಿಸರ ಎಂಬ ಪಾಠಪುಸ್ತಕ (ಸಮಯ: 25 ಗಂಟೆಗಳು)**<br>**2.1 ಪರಿಸರ ವಿಜ್ಞಾನ – ವಿವಿಧ ಮನೋವಿಜ್ಞಾನ ಸಂಬಂಧಿ ದೃಷ್ಟಿಕೋನಗಳು**<br>• ಪಿಯಾಷೆ, ಬ್ರೂನರ್, ಅಸುಬಲ್, ವೈಗೋಡ್‌ಸ್ಕಿ | • ಮನೋವಿಜ್ಞಾನ ಅಧ್ಯಾಯನ ಸಿದ್ದಾಂತಗಳನ್ನು ವಿಶ್ಲೇಷಿಸಿ ಮಗುವಿನ ಸ್ವಭಾವದಿಂದ ಪರಿಸರ ಅಧ್ಯಾಯನಕ್ಕೆ ಉಪಯೋಗಿಸಬಹುದಾದ ವಿಶೇಷತೆಗಳ ಕುರಿತಾದ ತಿಳುವಳಿಕೆಯನ್ನು ಗಳಿಸಿಕೊಳ್ಳುವುದು ಮತ್ತು ಸಂದರ್ಭಗಳನ್ನು ಬಳಸಿಕೊಳ್ಳುವುದು. (Cross reference with Psychology) |
| **2.2 ಮಗುವಿನ ಸ್ವಭಾವವನ್ನು ಪರಿಸರ ವಿಜ್ಞಾನದಲ್ಲಿ ಉಪಯೋಗಿಸುವುದು.**<br>• ಸಂಶೋಧನಾತ್ಮಕತೆ<br>• ಜಿಜ್ಞಾಸೆ<br>• ಸೃಜನಶೀಲತೆ<br>• ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ<br>• ಊಹನಾ ಸಾಮರ್ಥ್ಯ<br>• ನಿಗಮನವನ್ನು ರೂಪಿಸುವ ಸಾಮರ್ಥ್ಯ | ■ 1, 3, 5 ತರಗತಿಗಳಲ್ಲಿ ಪಾಠಮಾಡುವ ಅಧ್ಯಾಪಕ – ವಿದ್ಯಾರ್ಥಿಯ ತರಗತಿಯನ್ನು ನಿರೀಕ್ಷಿಸುವುದು. ಮಗುವಿನ ಕಲಿಕೆ ಎಷ್ಟು, ಹೇಗೆ ಮತ್ತು ಯಾವ ಸಂದರ್ಭಗಳಲ್ಲಿ ಪ್ರಯೋಜನವಾಗುವುದೆಂದು ನಿರೀಕ್ಷಣಾ ಪ್ರಕ್ರಿಯೆಯನ್ನು ದಾಖಲಿಸಬೇಕು.<br>ಸಾಮಾನ್ಯ ಚರ್ಚೆ. |
| **2.3 ಸಾಮಾಜಿಕ ಜ್ಞಾನ ನಿರ್ಮಾಣವಾದದ ಆಧಾರದಲ್ಲಿ ಪರಿಸರ ವಿಜ್ಞಾನ ಕಲಿಕೆ ಜ್ಞಾನ ನಿರ್ಮಾಣ ಪ್ರಕ್ರಿಯೆ**<br>• ಸಮಸ್ಯೆಗಳ ಮಂಡನೆ<br>ವಿವಿಧ ತಂತ್ರಗಳನ್ನು (ICT ಒಳಗೊಂಡಂತೆ) ಬಳಸುವುದು.<br>• ಸಮಸ್ಯೆಯ ವಿಶ್ಲೇಷಣೆ<br>ಸೂಕ್ತವಾದ ಪ್ರಶ್ನೆಗಳನ್ನು ಕೇಳುವುದು<br>ಸಮಸ್ಯೆಯ ಸೂಕ್ಷ್ಮತೆಗಳನ್ನು ತಿಳಿದುಕೊಳ್ಳುವುದು.<br>ಶೈಕ್ಷಣಿಕ ಹಿನ್ನಡೆಯ ಮಕ್ಕಳನ್ನು ಪ್ರೋತ್ಸಾಹಿಸುವುದು.<br>ಪಾಲ್ಗೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.<br><br>• ಸಮಸ್ಯಾ ಪರಿಹಾರದ<br>ವಿವಿಧ ಸಾಧ್ಯತೆಗಳು<br>ವಿಭಿನ್ನ ಚಿಂತನೆಗಳು<br>ಯುಕ್ತಿ ಚಿಂತನೆ<br>ಸಮಸ್ಯೆ ಪರಿಹಾರ ವಿಧಾನಗಳನ್ನು ಹಂಚಿಕೊಳ್ಳುವುದು.<br>ಒಳಿತು, ಕೆಡುಕುಗಳ ಚರ್ಚೆ<br>• ರಿಪೋರ್ಟಿಂಗ್ (ವರದಿ).<br>ಸಮಸ್ಯಾ ಪರಿಹಾರ ವಿಧಾನಗಳನ್ನು ಹಂಚಿಕೊಳ್ಳುವುದು<br>ಒಳಿತು ಕೆಡುಕುಗಳ ಚರ್ಚೆ | ▲ ಪರಿಸರ ವಿಜ್ಞಾನದ ವಿಶ್ಲೇಷಣೆಯ ಪ್ರಯೋಜನವನ್ನು ಪಡೆಯುವ ಮಗುವಿನ ಸ್ವಭಾವಗಳು ಯಾವುವು?<br><br>■ ಉಪಯೋಗಿಸಬಹುದಾದ ಪ್ರಯೋಗಗಳು / ಚಟುವಟಿಕೆಗಳು<br>ಉದಾಹರಣೆ:<br>• ಸಾಂದ್ರತೆ ಹೆಚ್ಚಿರುವುದು ತೆಂಗಿನ ಎಣ್ಣೆಗೋ? ಎಳ್ಳೆಣ್ಣೆಗೋ?<br>• ವೇಗವಾಗಿ ಭಾಷ್ಪೀಕರಣಗೊಳ್ಳುವುದು ಪೆಟ್ರೋಲ್/ಡೀಸೆಲ್?<br>• ಒಂದು ಮರದ ವಯಸ್ಸನ್ನು ಹೇಗೆ ಲೆಕ್ಕಹಾಕಬಹುದು?<br>• ಮಣ್ಣಿನ ಮಲಿನೀಕರಣ – ಸರ್ವೇ ಮಾಡಿ ಪ್ರತಿಯೊಂದು ಚಟುವಟಿಕೆಗಳಲ್ಲಿಯೂ ಜ್ಞಾನ ನಿರ್ಮಾಣ ಪ್ರಕ್ರಿಯೆಯ ಸೂಕ್ಷ್ಮ ಹಂತಗಳನ್ನು ಕಂಡುಕೊಳ್ಳುವುದು – ಚರ್ಚೆ.<br><br>▲ ಪರಿಸರ ವಿಜ್ಞಾನದಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ಒಳಗೊಳ್ಳುವಂತೆ ಕಲಿಕಾ ಚಟುವಟಿಕೆಗಳ ಯೋಜನೆಯನ್ನು ತಯಾರಿಸುವಾಗ ಗಮನಿಮಬೇಕಾದ ಅಂಶಗಳು ಯಾವುವು!<br><br>ಪ್ರಯೋಗ ಟಿಪ್ಪಣಿಗಳು / ವರದಿಗಳು ಇತ್ಯಾದಿಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಬಹುದು. |

| ವಿಷಯ | ವಿನಿಮಯ ರೀತಿ |
|---|---|
| **ಯೂನಿಟ್ 3 : ಪರಿಸರ ವಿಜ್ಞಾನ ಪಠ್ಯಪದ್ಧತಿ–ಸಮೀಪನ (ಸಮಯ: 15 ಗಂಟೆಗಳು)**<br>**3.1 ಪರಿಸರ ವಿಜ್ಞಾನದ ಉದ್ದೇಶಗಳು, (5 ಮಂಡಲಗಳು)**<br>• ವಿಜ್ಞಾನ ವಲಯ : ಪದಗಳು, ವಾಸ್ತವಿಕತೆಗಳು, ಆಶಯಗಳು<br>• ಪ್ರಕ್ರಿಯಾ ಸಾಮರ್ಥ್ಯ – ನಿರೀಕ್ಷಣೆ, ವರ್ಗೀಕರಣ, ಅಳತೆ, ಆಶಯ ವಿನಿಮಯ, ನಿಗಮನಗಳ ರೂಪೀಕರಣ, ಮಂಡನೆ, ಲಘು ಪ್ರಯೋಗಗಳು, ಊಹನೆ.<br>• ಪ್ರಯೋಗ ವಲಯ<br>• ಮೌಲ್ಯಗಳು ಮತ್ತು ಮನೋಭಾವಗಳು<br>• ಸೃಜನಶೀಲತೆ | • ಪರಿಸರ ವಿಜ್ಞಾನ ಕಲಿಕೆಯ ಉದ್ದೇಶಗಳನ್ನು ಅರಿತುಕೊಂಡು ಪರಿಸರ ಕಲಿಕೆಯನ್ನು ಫಲಪ್ರದವಾಗಿ ನಡೆಸಲು ಅಗತ್ಯವಾದ ಆಶಯಪರವಾದ ತಿಳುವಳಿಕೆಗಳನ್ನೂ ಕಲಿಕಾ ನೈಪುಣ್ಯಗಳನ್ನು ಗಳಿಸುವುದು.<br>■ ವಿವಿಧ ಜಲಮೂಲಗಳಿಂದ ಶೇಖರಿಸಿದ ನೀರಿನಿಲ್ಲಿರುವ ಮಾಲಿನ್ಯದ ಪ್ರಮಾಣವನ್ನು ಪರೀಕ್ಷಿಸುವುದು. (ಹ್ಯಾಂಡ್ ಲೆನ್ಸ್, ಟೋರ್ಚ್, ಟೆಸ್ಟ್‌ಟ್ಯೂಬ್)<br>• ಈ ಪ್ರಯೋಗದಿಂದ ಗಳಿಸಿದ ಆಶಯಗಳೇನು? ಪ್ರಕ್ರಿಯಾ ಸಾಮರ್ಥ್ಯಗಳು ಯಾವುವು?<br>• ಪ್ರಯೋಗದಲ್ಲಿ ಭಾಗವಹಿಸುವ ಮೂಲಕ ನೀವು ತೆಗೆದುಕೊಳ್ಳುವ ಮುಂದುವರಿದ ಚಟುವಟಿಕೆಗಳು ಯಾವುವು?<br>■ ಜಲ ಶುದ್ದೀಕರಣ ನಡೆಸಲು ಒಂದು ಲಘು ಪ್ರಯೋಗವನ್ನು ನಡೆಸಿರಿ.<br>▲ ಪರಿಸರ ವಿಜ್ಞಾನದ ಉದ್ದೇಶಗಳು ಒಳಗೊಂಡಿರುವ 5 ಮಂಡಲಗಳು ಯಾವುವು?<br>■ ಪ್ರತಿಯೊಂದು ಮಗು ಪರಿಸರ ವಿಜ್ಞಾನದ ಉದ್ದೇಶಗಳನ್ನು ತಿಳಿದುಕೊಳ್ಳಲು ಮಾಡಬೇಕಾದ ಕೆಲವು ಚಟುವಟಿಕೆಗಳನ್ನು ನಿರ್ದೇಶಿಸಿರಿ.<br>ಪ್ರಯೋಗ – ರೂಪುರೇಷೆಗಳು, ಮೌಲ್ಯಮಾಪನ |
| **3.2 ಸಂಯೋಜಿತ ಸಮೀಪನ ಮತ್ತು ಪರಿಸರ**<br>• ಸಂಯೋಜನೆ ಹೇಗೆ? – ಸೈದ್ಧಾಂತಿಕ ತಳಹದಿ<br>• ವಿಜ್ಞಾನ, ಸಮಾಜ ವಿಜ್ಞಾನ ಎಂಬಿವುಗಳ ಸಂಯೋಜನೆ<br>• ಕಲೆ, ದೈಹಿಕ, ವೃತ್ತಿ ಪರಿಚಯ, ನೀತಿಬೋಧನೆ (ಶುಚಿತ್ವ, ಆಹಾರಾಭ್ಯಾಸಗಳು) ಜೀವನ ನೈಪುಣ್ಯಗಳು ಮುಂತಾದ ವಿಷಯಗಳು ಮತ್ತು ವಲಯಗಳ ಸಂಯೋಜನೆ | • ಪರಿಸರ ವಿಜ್ಞಾನದ ಸಂಯೋಜನಾ ಸ್ವಭಾವವನ್ನು ತಿಳಿದುಕೊಳ್ಳುವುದು ಸಂಯೋಜನ ಸೌಧ್ಯತೆಗಳು ಒಳಗೊಂಡಿರುವ ಚಟುವಟುಕೆಗಳನ್ನು ತಯಾರಿಸುವುದು.<br>▲ ವಿಷಯದ ವಿಶ್ಲೇಷಣೆ – ವಾಸಸ್ಥಳಗಳು ಎಂಬ ವಲಯವನ್ನು ವಿಶ್ಲೇಷಣೆ ಮಾಡಿ ಅದರಲ್ಲಿ ಸಂಯೋಜಿಸಲ್ಪಟ್ಟಿರುವ ಇತರ ವಿಷಯಗಳನ್ನು ಕಂಡುಕೊಳ್ಳುವುದು. 'ವಾಸಸ್ಥಳ' ಗಳ ಸಂಚಿಕೆಯ ತಯಾರಿ.<br>■ ಪರಿಸರ ವಿಜ್ಞಾನದಲ್ಲಿ ಸಂಯೋಜನಾ ಸ್ವಭಾವ ಪ್ರಕಟಿಸಲ್ಪಡುವ ಇತರ ವಿಷಯಗಳು/ಆಶಯಗಳನ್ನು ಕಂಡುಕೊಳ್ಳುವುದು.<br>▲ ಪರಿಸರ ವಿಜ್ಞಾನದಲ್ಲಿ ನೀತಿ ಶಿಕ್ಷಣದ ಘಟಕಗಳು ಒಳಗೊಂಡಿವೆಯೇ?<br>▲ ಜೀವನ ನೈಪುಣ್ಯಗಳ ಬೆಳವಣಿಗೆಯಲ್ಲಿ ಪರಿಸರ ವಿಜ್ಞಾನ ಕಲಿಕೆ ಹೇಗೆ ಸಹಾಯಮಾಡುವುದು? |

## $S_1.P_5$ ಪರಿಸರ ಒಂದು ಪಾಠಪುಸ್ತಕ – ಮೌಲ್ಯಮಾಪನ ವಿಷಯಗಳು

| | ಯೂನಿಟ್ | ಮೌಲ್ಯಮಾಪನ ವಿಷಯಗಳು |
|---|---|---|
| 1. | **ಪರಿಸರ ವಿಜ್ಞಾನ – ಅರ್ಥ ಮತ್ತು ವ್ಯಾಪ್ತಿ**<br>1.1 ಪರಿಸರ ವಿಜ್ಞಾನ – ಹಂತಗಳು<br>1.2 ಪರಿಸರ ವಿಜ್ಞಾನ – ಶಾಖೆಗಳು–ಬೆಳವಣಿಗೆಯ ಹಂತಗಳು<br>1.3 ಪರಿಸರ, ಪರಿಸರ ವ್ಯವಸ್ಥೆ (Eco System)<br>1.4 ಸುಸ್ಥಿರ ಅಭಿವೃದ್ಧಿಗೆ ಪರಿಸರ ಅಧ್ಯಯನ<br>1.5 ನನ್ನ ಪರಿಸರ<br>1.6 ಪರಿಸರ ಸೌಹಾರ್ದ ಮನೋಭಾವನೆ | 1.3 ಪರಿಸರ ವ್ಯವಸ್ಥೆಗಳು Concept map/Ven diagram<br>1.4 ಸೆಮಿನಾರ್<br>1.5 ಪ್ರಾದೇಶಿಕ ಸಂಪನ್ಮೂಲ ಭೂಪಟ<br>1.6 ತಿಳುವಳಿಕೆಯ ಉಪಾದಿಗಳು |
| 2. | **ಪರಿಸರ ಎಂಬ ಪಾಠಪುಸ್ತಕ**<br>2.1 ಪರಿಸರ ವಿಜ್ಞಾನ – ವಿವಿಧ ಮನಃಶಾಸ್ತ್ರ ಸಿದ್ಧಾಂತಗಳೊಂದಿಗಿನ ದೃಷ್ಟಿಕೋನ<br>2.2 ಮಗುವಿನ ಸ್ವಭಾವವನ್ನು ಪರಿಸರ ವಿಜ್ಞಾನಕ್ಕೆ ಬಳಸಿಕೊಳ್ಳುವುದು.<br>2.3 ಪರಿಸರ ವಿಜ್ಞಾನ ಕಲಿಕೆ – ಸಾಮಾಜಿಕ ಜ್ಞಾನ ನಿರ್ಮಾಣವಾದದ ತಳಹದಿ | 2.3 ಪ್ರಯೋಗ, ಟಿಪ್ಪಣಿ, ವರದಿಗಳು |
| 3. | **ಪರಿಸರ ವಿಜ್ಞಾನ ಪಠ್ಯಪದ್ಧತಿ ಮತ್ತು ಸಮೀಪನ**<br>3.1 ಪರಿಸರ ವಿಜ್ಞಾನ ಉದ್ದೇಶಗಳು – ಗುರಿಗಳು<br>3.2 ಸಂಯೋಜಿತ ಸಮೀಪನ ಮತ್ತು ಪರಿಸರ ಅಧ್ಯಾಯನ | 3.1 ಪ್ರಯೋಗ ರೂಪುರೇಷೆ<br>3.2 Booklet–ವಸತಿ |

### 7.3.6 ಗಣಿತ ಶಾಸ್ತ್ರ ಕಲಿಕೆ

ಅಧ್ಯಾಪಕ ವಿದ್ಯಾರ್ಥಿಗಳಿಗೆ ಗಣಿತ ಶಾಸ್ತ್ರ ಅಧ್ಯಾಯನದ ಬುನಾದಿಯನ್ನು ಹಾಕಲು 1ನೇ ಸೆಮಿಸ್ಟರ್‌ನಲ್ಲಿ **'ಗಣಿತ ಶಾಸ್ತ್ರ ಕಲಿಕೆ ಮತ್ತು ಸಮೀಪನೆ'** ಎಂಬ ಪೇಪರನ್ನು ಪರಿಚಯಿಸಲಾಗಿದೆ. ಇದರ ವಿವರಣೆಯನ್ನು ಕೆಳಗೆ ನೀಡಲಾಗಿದೆ.

#### ಪ್ರಸಕ್ತಿ

ಗಣಿತವು ಮಾನವನ ನಿತ್ಯಜೀವನದಲ್ಲಿ ಬಳಸುವ ವಿಷಯವಾಗಿದೆ. ನಿತ್ಯಜೀವನದಲ್ಲಿ ನಾವು ಉಪಯೋಗಿಸುವ ವಸ್ತುಗಳಲ್ಲಿರುವ ಗಣಿತದ ಆಶಯಗಳನ್ನು ಅರ್ಥವತ್ತಾಗಿ ತಿಳಿದುಕೊಳ್ಳಲು ಪ್ರಾಥಮಿಕ ಹಂತದಲ್ಲಿ ಗಣಿತವನ್ನು ಸೇರಿಸಲಾಗಿದೆ. ಶಾಲೆಯಲ್ಲಿ ಅಧ್ಯಯನ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಿಂತಲೂ ಮೊದಲೇ ಗಣಿತಕ್ಕೆ ಸಂಬಂಧಿಸಿದ ಆಶಯಗಳನ್ನು ಮಗು ತನ್ನ ಸ್ವತಃ ಅನುಭವದಲ್ಲಿ ಗಳಿಸಿಕೊಂಡಿರುವುದು. ಆದರೆ ಈ ಅನುಭವಗಳಿಗಿಂತ ವ್ಯತ್ಯಸ್ತವಾಗಿ ಸ್ಪಷ್ಟ ಮತ್ತು ಕ್ರಮಾನುಗತವಾದ ರೀತಿಯಲ್ಲಿ ಗಣಿತವನ್ನು ಬಳಸುವಾಗ ಅದು ಸ್ವಾಭಾವಿಕವಾಗಿ ಭಿನ್ನವಾಗಿ ನಿಲ್ಲುವುದು. ಇದು ಗಣಿತವನ್ನು ಕಠಿಣವಾದ ಪಾಠವನ್ನಾಗಿಸುವುದು. ಈ ಸಮಸ್ಯೆಯನ್ನು ಬಗೆಹರಿಸಿ ಸ್ವಾಭಾವಿಕವಾದ ರೀತಿಯಲ್ಲಿ ಗಣಿತಶಾಸ್ತ್ರವನ್ನು ಕಲಿಸುವ ಅನುಭವಗಳನ್ನು ಅಧ್ಯಾಪಕ ವಿದ್ಯಾರ್ಥಿಗಳಲ್ಲಿ ಉಂಟುಮಾಡಬೇಕು. ಗಣಿತದ ಆಶಯಕ್ಕೆ ಸಂಬಂಧಿಸಿದ ವಾಸ್ತವಿಕತೆಗಳು, ತತ್ವಗಳು, ಆಶಯಗಳು ಇತ್ಯಾದಿಗಳನ್ನು ಹಂತ ಹಂತವಾಗಿ ತಿಳಿದು ಕಲಿಕಾ ಚಟುವಟಿಕೆಗಳನ್ನು ರೂಪಿಸುವುದಕ್ಕೆ, ಅನುಭವವನ್ನು ಅಧ್ಯಾಪಕ ವಿದ್ಯಾರ್ಥಿ ಪಡೆಯುತ್ತಾನೆ. ಮೂರ್ತತೆಯಿಂದ ಅಮೂರ್ತತೆಯ ಕಡೆಗೆ ಆಶಯಗಳನ್ನು ಸರಳಗೊಳಿಸಲೂ ಯುಕ್ತಿಪರವಾದ ವಾದಗಳನ್ನು ಸಂಶಯ ನಿರ್ವಹಣೆಗಾಗಿ ಬಳಸಲೂ ಗಣಿತ ಚಿಹ್ನೆಗಳನ್ನು ಬಳಸಿ ಆಶಯಗಳನ್ನು ಲಘೂಕರಿಸಲೂ, ಗಣಿತ ಅಧ್ಯಯನದಿಂದ ಸಾಧ್ಯವಾಗಬೇಕು. ಸಮಸ್ಯೆಯನ್ನು ನಿರ್ಧರಿಸುವುದು, ವಿವರಣೆಯನ್ನು ಅರ್ಥೈಸಿಕೊಳ್ಳುವುದು, ಚಿತ್ರೀಕರಿಸುವುದು ಇತ್ಯಾದಿ ಹಿರಿಮೆಗಳನ್ನು ಗಣಿತದ ಮೂಲಕ ಗಳಿಸಬೇಕಾಗುದೆ. ಈ ರೀತಿಯಾಗಿ ನಿತ್ಯಜೀವನದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಜೀವನದ ಯಶಸ್ವಿಗೆ ಅಗತ್ಯವಾದ ನಿಷ್ಠೆ, ಸೂಕ್ಷ್ಮತೆ, ಸರಳ ಮತ್ತು ಯೋಜನಾ ಬದ್ಧವಾದ ಚಟುವಟಿಕೆಗಳು, ಯುಕ್ತಿ ಚಿಂತನೆಯೊಂದಿಗಿನ ವಿಕಾಸ ಇತ್ಯಾದಿಗಳನ್ನು ಗಳಿಸಲು ಗಣಿತ ಅಧ್ಯಯನದಿಂದ ಸಾಧ್ಯವಾಗಬೇಕು.

#### ಗಣಿತಶಾಸ್ತ್ರ ಕಲಿಕೆಯ ಉದ್ದೇಶಗಳು (ಸೆಮೆಸ್ಟರ್ 1 ಮತ್ತು 2)

ಕೆಳಗೆ ನೀಡಿರುವ ಉದ್ದೇಶಗಳನ್ನು ಅಧ್ಯಾಪಕ ವಿದ್ಯಾರ್ಥಿ ಗಳಿಸಬೇಕಾಗಿದೆ.

- ಗಣಿತ ಎಂದರೇನು? ಗಣಿತದ ಸ್ವಭಾವ, ರಚನೆ, ಗಣಿತ ಕಲಿಕೆಯ ಉದ್ದೇಶಗಳು ಇತ್ಯಾದಿಗಳಿಗೆ ಸಂಬಂಧಿಸಿದ ತಿಳುವಳಿಕೆಯನ್ನು ಪಡೆಯುವುದು.
- ಗಣಿತ ಕಲಿಕೆಗೆ ಸಂಬಂಧಿಸಿ ಪ್ರಾಥಮಿಕ ಹಂತದ ವಿಷಯದ ಬಗ್ಗೆ ಸ್ಪಷ್ಟವಾದ ಅರಿವು ಗಳಿಸಿಕೊಳ್ಳುವುದು.
- ಗಣಿತಕ್ಕೆ ಸಂಬಂಧಿಸಿದ ಜ್ಞಾನವನ್ನು ವಿದ್ಯಾರ್ಥಿಗಳು ಗಳಿಸಲು ಅಗತ್ಯವಿರುವ ವಿನಿಮಯ ವಿಧಾನ ಮತ್ತು ರೀತಿಶಾಸ್ತ್ರವನ್ನು ಗಳಿಸುವುದು.
- ಗಣಿತ ಕಲಿಕೆಯನ್ನು ಗುಣಾತ್ಮಕವಾಗಿ ನಡೆಸಲು ಅಗತ್ಯವಾದ ಅಧ್ಯಾಪಕನ ಭಾಗವಹಿಸುವಿಕೆ, ಉತ್ತಮ ರೀತಿಯ ಬೋಧನಾ ನೈಪುಣ್ಯವನ್ನು ಗಳಿಸುವುದು, ನೂತನವಾದ ಮೌಲ್ಯನಿರ್ಣಯ ರೀತಿಗಳನ್ನು ಅಳವಡಿಸುವುದು ಇತ್ಯಾದಿಗಳಲ್ಲಿ ತಿಳುವಳಿಕೆಯನ್ನು ಗಳಿಸುವುದು.

| $S_1.P_6$ | ಗಣಿತಶಾಸ್ತ್ರ ಕಲಿಕೆ ಮತ್ತು ಸಮೀಪನ |
|---|---|

| | | |
|---|---|---|
| ಒಟ್ಟು ಅಂಕಗಳು | : | 20<br>(ನಿರಂತರ ಮಾಲ್ಯಮಾಪನ ಸಿ.ಇ. 20 ಮಾತ್ರ) |
| ಒಟ್ಟು ಸೆಮೆಸ್ಟರ್‌ನ ಸಮಯ | : | 65 ಗಂಟೆಗಳು |
| ಒಟ್ಟು ವಾರದಲ್ಲಿ ಸಮಯ | : | 3 ಗಂಟೆಗಳು |

## ವಿಷಯ

**ಯೂನಿಟ್ 1** : **ಗಣಿತಶಾಸ್ತ್ರದ ಲಕ್ಷಣಗಳು ಮತ್ತು ಉದ್ದೇಶಗಳು**
(ಸಮಯ : 9 ಗಂಟೆಗಳು)

**ಯೂನಿಟ್ 2** : **ಗಣಿತಶಾಸ್ತ್ರ ಕಲಿಕೆಯ ಸಮೀಪನೆ**
(ಸಮಯ : 15 ಗಂಟೆಗಳು)

**ಯೂನಿಟ್ 3** : **ಗಣಿತಶಾಸ್ತ್ರದ ಕಲಿಕಾ ಪರವಾದ ವಿಷಯದ ವಿಶ್ಲೇಷಣೆ** (Pedagogic Analysis)
(ಸಮಯ : 27 ಗಂಟೆಗಳು)

**ಯೂನಿಟ್ 4** : **ಗಣಿತಶಾಸ್ತ್ರ ಕಲಿಕೆಯ ಬೋಧನ ವಿಧಾನಗಳು**
(ಸಮಯ : 14 ಗಂಟೆಗಳು)

## $S_1$. $P_6$ ಗಣಿತಶಾಸ್ತ್ರ ಕಲಿಕೆ ಮತ್ತು ಸಮೀಪನೆ – ಯೂನಿಟಿನ ವಿವರಣೆಗಳು

| ವಿಷಯ | ವಿನಿಮಯ |
|---|---|
| **ಯೂನಿಟ್ 1 : ಗಣಿತಶಾಸ್ತ್ರದ ಲಕ್ಷಣಗಳು ಮತ್ತು ಉದ್ದೇಶಗಳು (9 ಗಂಟೆಗಳು)**<br>● **ಗಣಿತಶಾಸ್ತ್ರ ಎಂದರೇನು?**<br>● **ಗಣಿತಶಾಸ್ತ್ರದ ಲಕ್ಷಣಗಳು**<br>• ನಿಖರತೆ, ಸೂಕ್ಷ್ಮತೆ (ಸಂದರ್ಭ ಮತ್ತು ಅಗತ್ಯಗಳಿಗನುಸಾರವಾಗಿ ಬದಲಾವಣೆ)<br>• ಮೂರ್ತ ಮತ್ತು ಅಮೂರ್ತ ಸ್ವಭಾವ<br>• ಆಶಯಗಳ ಪರಸ್ಪರ ಸಂಬಂಧ<br>• ಗಣಿತ ಒಂದು ಭಾಷೆ<br>• ಯುಕ್ತಿ ಪರವಾದ ಘಟಕ<br>• ರಚನೆಗಳು (ಜ್ಯಾಮಿತಿಯೊಂದಿಗೆ ಸಂಬಂಧಿಸಿ)<br>• ಯುಕ್ತಿ ಚಿಂತನೆ<br>● **ಗಣಿತ ಕಲಿಕೆ ಯಾಕೆ?**<br>• ಗಣಿತ ಚಿಂತನೆಗಳು<br>• ಗಣಿತದ ಸೌಂದರ್ಯ<br>• ಗಣಿತದ ಪ್ರಾಯೋಗಿಕತೆ<br>• ಇತರ ವಿಷಯಗಳೊಂದಿಗಿನ ಸಂಬಂಧ<br>• ಒಂದು ಆಶಯ ವಿನಿಮಯ ಉಪಾದಿಯಾಗಿ ಗಣಿತ | ● ಗಣಿತದ ಲಕ್ಷಣಗಳನ್ನು ಅರಿತುಕೊಂಡು ಗಣಿತ ಕಲಿಕೆಯನ್ನು ಉತ್ತಮಪಡಿಸುವ ಸವಾಲುಗಳನ್ನು ಮತ್ತು ಸಾಧ್ಯತೆಗಳನ್ನು ಕಂಡುಕೊಳ್ಳುವುದು.<br>● ಗಣಿತ ಸ್ವಭಾವಕ್ಕೆ ಅನುಗುಣವಾದ ಕಲಿಕಾ ಸಮೀಪನಗಳನ್ನು ಕಂಡುಕೊಳ್ಳುವುದು.<br>▲ ಇತರ ವಿಷಯಗಳಲ್ಲಿ ಹೇಗೆ ಗಣಿತವನ್ನು ಬಳಸಬಹುದು?– ಗಣಿತ ಕಲಿಕೆಯ ಉದ್ದೇಶಗಳೇನು?<br>▲ ಒಂದು ಆಶಯ ವಿನಿಯಯದ ಉಪಾದಿಯಾಗಿ ಗಣಿತವು ಹೇಗೆ ಪ್ರಯೋಜನಕಾರಿಯಾಗಿದೆ?<br>■ ಗಣಿತದ ಕೆಲವು ಅಮೂರ್ತ ಆಶಯಗಳನ್ನು ಮೂರ್ತ ವಾಸ್ತವಿಕತೆ/ ಅನುಭವಗಳ ಆಧಾರದಲ್ಲಿ ವಿವರಿಸಿರಿ.<br>■ ಬಣ್ಣ, ವಿಸ್ತೀರ್ಣ, ಆಕೃತಿ, ಗಾತ್ರ, ಭಾರ ಇತ್ಯಾದಿ ಭೌತಿಕ ಲಕ್ಷಣಗಳು ಗಣಿತದೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆ? ಎಂದು ಮಂಡಿಸುವುದು. |
| ● **ಗಣಿತದ ಹುಟ್ಟು ಮತ್ತು ಬೆಳವಣಿಗೆ**<br>• ಕಾಲಘಟ್ಟ<br>• ಬೆಳವಣಿಗೆಯ ಪ್ರಧಾನ ಹಂತಗಳು ಮತ್ತು ಕಾಲಘಟ್ಟ (ಸಂಖ್ಯೆಗಳ ಬೆಳವಣಿಗೆ ಜ್ಯಾಮಿತಿಗೆ ಸಂಬಂಧಿಸಿ)<br>**ಯೂನಿಟ್ 2 : ಗಣಿತಶಾಸ್ತ್ರ ಕಲಿಕೆಯ ಸಮೀಪನೆ (ಸಮಯ 15 ಗಂಟೆಗಳು)**<br>● **ಗಣಿತ ಕಲಿಕಾ ಸಮೀಪನ**<br>• ಚಟುವಟಿಕಾಧಾರಿತ<br>• ಪ್ರಕ್ರಿಯಾ ಸಾಮರ್ಥ್ಯಗಳಿಗೆ ಪ್ರೋತ್ಸಾಹ (ಸಮಸ್ಯೆ ಪರಿಹಾರ, ವ್ಯತ್ಯಸ್ತ ವಿಧಾನಗಳನ್ನು ಕಂಡುಕೊಳ್ಳುವುದು, ಹೋಲಿಕೆ, ನಿಗಮನ ರೂಪೀಕರಣ, ಸಾಮಾನ್ಯೀಕರಣ, Meta thinking, ಆಶಯ ವಿನಿಮಯ, ಸಮಸ್ಯೆ ರೂಪೀಕರಣ, ನಿರೀಕ್ಷಣೆ, ಹೊಂದಾಣಿಕೆ, ವರ್ಗೀಕರಣ, ವಿಲೋಮ, ಕ್ರಮೀಕರಿಸುವುದು, ವ್ಯಾಖ್ಯಾನಿಸುವುದು, ಪರಿಶೀಲಿಸುವುದು, ಮೌಲ್ಯಮಾಪನ, ಪ್ರಯೋಗ, ನಿರ್ವಚನ, ಅಳತೆಮಾಡುವುದು, ಉಪಕರಣಗಳನ್ನು ಉಪಯೋಗಿಸುವುದು, ತಿಳಿಸುವುದು, ಕ್ರೋಡೀಕರಣ ತಖ್ತೆಗೊಳಿಸುವುದು, ಮನಸ್ಸಲ್ಲೇ ಲೆಕ್ಕಮಾಡುವುದು. | ▲ ಗಣಿತ ಬೋಧನೆ ಮತ್ತು ಕಲಿಕೆಯೊಂದಿಗೆ ಪ್ರಕ್ರಿಯಾ ಸಾಮರ್ಥ್ಯಗಳು ಹೇಗೆ ಸಂಬಂಧ ಹೊಂದಿವೆ.<br>▲ ಗಣಿತಶಾಸ್ತ್ರ ಬೋಧನೆಯಲ್ಲಿ ಪ್ರಶ್ನೆಗಳ (open ended questions) ಪ್ರಸ್ತುತತೆ ಏನು? ಈ ರೀತಿಯ ಚಟುವಟಿಕೆಗಳಲ್ಲಿ ಯಾವೆಲ್ಲಾ ಗಣಿತ ಸಾಮರ್ಥ್ಯಗಳು ಮಕ್ಕಳಲ್ಲಿ ವಿಕಾಸಗೊಳ್ಳುವುದು?<br>■ ಗಣಿತ ಆಶಯಗಳು ಮತ್ತು ಸಾಮರ್ಥ್ಯಗಳನ್ನು ತಿಳಿದುಕೊಂಡು ಅವುಗಳಲ್ಲಿ ಅಡಕವಾಗಿರುವ ಪ್ರಕ್ರಿಯಾ ಸಾಮರ್ಥ್ಯಗಳನ್ನು ಕಂಡುಕೊಳ್ಳುವುದು.<br>■ ವಿವಿಧ ಪ್ರಕ್ರಿಯಾ ಸಾಮರ್ಥ್ಯಗಳನ್ನು ವಿಕಾಸಗೊಳಿಸಲು ಕಲಿಕಾ ಚಟುವಟಿಕೆಗಳನ್ನು ಆಯೋಜಿಸಿಕೊಳ್ಳುವುದು.<br>■ ಆಯ್ದ ಅಮೂರ್ತ ಗಣಿತ ಆಶಯಗಳನ್ನು ದೃಶ್ಯಾವಳಿಗಳಾಗಿ (ಚಿತ್ರ) ಮಾರ್ಪಡಿಸುವುದು.<br>■ ಗಮನಯುಕ್ತ ಮತ್ತು ನಿಗಮನಯುಕ್ತ ಎಂಬವುಗಳು ಹೇಗೆ ವ್ಯತ್ಯಸ್ತವಾಗಿವೆ ಎಂದು ಗಣಿತ ಕಲಿಕೆ ಸಮೀಪನದ ಆಧಾರದೊಂದಿಗೆ ವಿವರಿಸುವುದು.<br>■ ಪ್ರಕ್ರಿಯಾ ಸಾಮರ್ಥ್ಯಗಳನ್ನು ಆರ್ಜಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯಕವಾಗುವ ರೀತಿಯಲ್ಲಿ ಗಣಿತದ ವಿವಿಧ ವಲಯಗಳಿಂದ ನೇರ ಪ್ರಶ್ನೆಗಳನ್ನು ತಯಾರಿಸುವುದು. |

| ವಿಷಯ | ವಿನಿಮಯ |
| --- | --- |
| • ಪರಿಸರಕ್ಕೆ ಸಂಬಂಧಿಸಿದ<br>• ಸಮಸ್ಯೆಗೆ ಹೊಂದಿಕೊಂಡು<br>• ಸಮಸ್ಯೆಯ ವಿಶ್ಲೇಷಣೆ<br>• ಚರಿತ್ರೆಯೊಂದಿಗೆ ಅಧ್ಯಯನ<br>• ವಿಲೋಮ ಪ್ರಸ್ತಾವನೆ ಹಾಗು ಊಹನೆ<br>• ನೇರ ಪ್ರಶ್ನೆಗಳು<br>• ದೃಶ್ಯಾವಳಿಗೊಳಿಸುವುದು (Visualisation)<br>• ಸಾಮಾನ್ಯೀಕರಣ<br>• **ಹಿಡನ್ ಕರಿಕುಲರ್ ವಲಯಗಳೊಂದಿಗೆ ಸಂಬಂಧಪಟ್ಟವುಗಳು**<br>(ಲಿಂಗಸಮಾನತೆ/ ವಿಶೇಷ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ಅಗತ್ಯವಾದ ಸಮೀಪನ ರೀತಿಗಳು, ಸಮಾಜ ನೀತಿ, ವ್ಯಕ್ತಿ ಭಿನ್ನತೆ)<br>**ಯೂನಿಟ್ 3: ಗಣಿತಶಾಸ್ತ್ರದ ಕಲಿಕಾಪರವಾದ ವಿಷಯದ ವಿಶ್ಲೇಷಣೆ (ಸಮಯ 27 ಗಂಟೆಗಳು)**<br>ಕೆಳಗೆ ನೀಡಿರುವ ವಲಯಗಳಿಗೆ ಸಂಬಂಧಿಸಿ ಆಶಯಗಳ ವಿವಿಧ ಹಂತಗಳು, ಇವುಗಳನ್ನು ಗಳಿಸಲು ಅಗತ್ಯವಾದ ಚಟುವಟಿಕೆಗಳು, ಸಂಬಂಧಿಸಿದ ಚಾರಿತ್ರಿಕ ಸತ್ಯಾಂಶಗಳು, ಬೆಳವಣಿಗೆ ಮತ್ತು ನಿರಂತರತೆ ಎಂಬಿವುಗಳನ್ನು ತಿಳಿದುಕೊಳ್ಳುವುದು.<br><br>**ಸಂಖ್ಯಾ ಕಲಿಕೆ**<br>• ಸಂಖ್ಯೆ ಎಂಬ ಆಶಯ, ಎಣಿಕಾ ಸಂಖ್ಯೆಗಳು, ಭಾಜ್ಯ ಮತ್ತು ಅವಿಭಾಜ್ಯ ಸಂಖ್ಯೆಗಳು<br>• ನಮೂನೆಗಳು<br>• ಅಪವರ್ತನಗಳು<br>• 2, 3, 4, 5, 6, 8, 9, 11 ಎಂಬ ಸಂಖ್ಯೆಗಳಿಂದ ಒಂದು ಸಂಖ್ಯೆಯನ್ನು ನಿಶ್ಶೇಷವಾಗಿ ಭಾಗಿಸಲು ಸಾಧ್ಯವೇ ಎಂದು ಪರೀಕ್ಷಿಸುವುದು.<br>• ಚತುಷ್ಕ್ರಿಯೆಗಳು<br>• ಭಿನ್ನಸಂಖ್ಯೆಗಳು<br>• ದಶಾಂಶ ಸಂಖ್ಯೆಗಳು<br><br>**ಜ್ಯಾಮಿತಿ**<br>• ಜ್ಯಾಮಿತೀಯ ಆಕೃತಿಗಳನ್ನು (ಆಯತ, ವೃತ್ತ, ತ್ರಿಕೋನ) ರಚಿಸುವುದು ಮತ್ತು ನಿರ್ಮಿಸುವುದು. ಇವುಗಳನ್ನು ಉಪಯೋಗಿಸಿ ನಿರ್ಮಾಣ ಚಟುವಟಿಕೆಗಳು<br>• ಟೆಸಲೇಶನ್<br>• ಸರ್ವಸಮ<br>• ಸ್ಪೇಶಲ್ ಜೋಮೆಟ್ರಿ | • ಸಂಖ್ಯೆಯ ಕುರಿತಾಗಿರುವ ಪೂರ್ವಆಶಯಗಳನ್ನು ಕಲಿಕೆಯಲ್ಲಿ ಹೇಗೆ ಉಪಯೋಗಿಸಬಹುದು? ಎಂಬ ಬಗ್ಗೆ ಮಂಡಿಸಲಾಗುವುದು.<br>■ ಪ್ರಾಥಮಿಕ ಹಂತದಲ್ಲಿ ನಮೂನೆಗಳನ್ನು (models) ಕಲಿಕೆಯಲ್ಲಿ ಹೇಗೆ ಉಪಯೋಗಿಸಬಹುದೆಂದು ವಿವರಿಸುವುದು.<br>■ ಗಣಿತದ ಮೂಲ ಆಶಯಗಳ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಉಂಟಾಗಲು ಸಾಧ್ಯತೆಯಿರುವ ತಪ್ಪು ಅಭಿಪ್ರಾಯಗಳನ್ನು ಕಂಡುಹಿಡಿಯುವುದು. ಇದಕ್ಕಾಗಿ ಅವರ ನೋಟ್ ಪುಸ್ತಕಗಳನ್ನು ಪರಿಶೋಧಿಸಿ ಯೋಗ್ಯವಾದ ಪ್ರಶ್ನೆಗಳನ್ನು ಕೇಳಿ ಪರಿಹರಿಸುವುದು.<br>■ ಬೆಳವಣಿಗೆ, ಹೆಚ್ಚಳ ಇತ್ಯಾದಿ ಸಾಮಾನ್ಯ ಆಶಯಗಳ ನಿತ್ಯಜೀವನದ ಉದಾಹರಣೆಗಳು ಗಣಿತದ ಆಶಯಗಳೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆ ಎಂಬುದನ್ನು ವಿಶದೀಕರಿಸುವುದು.<br>■ ಚತುಷ್ಕ್ರಿಯೆಗಳ ನಡುವಿನ ಸಂಬಂಧವನ್ನು ಗ್ರಾಫಿನ ಸಹಾಯದಿಂದ ಮಂಡಿಸುವುದು.<br>■ ಅಪವರ್ತ್ಯಗಳು, ಅಪವರ್ತನಗಳು ಇತ್ಯಾದಿ ಗಣಿತ ಆಶಯಗಳನ್ನು ವ್ಯತ್ಯಸ್ತ ರೀತಿಯಲ್ಲಿ ವಿವರಿಸುವುದು.<br><br>■ ನಮೂನೆಗಳು, ಟೆಸ್ಸಲೇಶನ್ ಎಂಬಿವುಗಳ ಎಂ.ಐ. ಸಾಧ್ಯತೆಗಳನ್ನು ಕಂಡುಕೊಳ್ಳುವುದು.<br>■ ಗಣಿತದ ಆಶಯಗಳ ವಿನಿಮಯಕ್ಕಾಗಿ ವರ್ಕ್‌ಶೀಟ್‌ಗಳನ್ನು ತಯಾರಿಸುವುದು.<br>■ 1 ರಿಂದ 5 ನೇ ತರಗತಿಯ ವರೆಗಿನ ಪಾಠಭಾಗಗಳನ್ನು ಪರಿಶೀಲಿಸಿ ಪ್ರತಿಯೊಂದು ಚಟುವಟಿಕೆಯು ಯಾವೆಲ್ಲಾ ಪ್ರಕ್ರಿಯಾ ಸಾಮರ್ಥ್ಯಗಳಿಗೆ ಸಂಬಂಧಿಸಿದೆಯೆಂದು ಚರ್ಚಿಸಿ ದಾಖಲಿಸುವುದು. |

| ವಿಷಯ | ವಿನಿಮಯ |
|---|---|
| **ಅಳತೆಗಳು**<br>• ಉದ್ದ, ಸುತ್ತಳತೆ, ವಿಸ್ತೀರ್ಣ (ಚೌಕ ,ಆಯತ) ಘನಫಲ, ಸಮಯ, ಭಾರ, ಹಣ, ಕ್ಯಾಲೆಂಡರ್<br><br>**ದತ್ತಾಂಶಗಳ ವಿಶ್ಲೇಷಣೆ**<br>• ವರ್ಗೀಕರಿಸುವುದು, ಗುಂಪು ಮಾಡುವುದು, ತಖ್ತೆ ಮಾಡುವುದು, ಚಿತ್ರೀಕರಿಸುವುದು.<br>• ಸರಳವಾದ ಗ್ರಾಫ್‌ಗಳಿಂದ ವಿವರಣೆಗಳನ್ನು ಸಂಗ್ರಹಿಸುವುದು.<br><br>**ಯೂನಿಟ್ 4 : ಗಣಿತ ಶಾಸ್ತ್ರ ಕಲಿಕೆಯ ಬೋಧನಾ ವಿಧಾನಗಳು (ಸಮಯ 14 ಗಂಟೆಗಳು)**<br>• ಗಣಿತ ಅಧ್ಯಯನದ ಸೈದ್ಧಾಂತಿಕ ತಳಹದಿ,ಪಿಯಾಷೆ, ಬ್ರೂನರ್, ಸ್ಕೈಬ್, ವೈಗೋಟ್‌ಸ್ಕಿ ಮುಂತಾದವರ ಸಿದ್ಧಾಂತಗಳು<br>• ಜ್ಞಾನ ನಿರ್ಮಾಣದ ವಿವಿಧ ಹಂತಗಳು<br>• ಗಣಿತ ಆಶಯ ರೂಪೀಕರಣದ ವಿವಿಧ ಹಂದಗಳು (ELPS, ...)<br>• ಗಣಿತ ಕಲಿಕಾ ತಂತ್ರ ಮತ್ತು ರೀತಿಗಳು<br>- ಗಮನಯುಕ್ತ ಮತ್ತು ನಿಗಮನಯುಕ್ತ<br>- ಪ್ರೋಜೆಕ್ಟ್ ರೀತಿ<br>- ಸಂಶೋಧನಾ ರೀತಿ<br>- ಪ್ರಯೋಗ ರೀತಿ<br>- ವಿಶ್ಲೇಷಣಾ – ಸಂಶ್ಲೇಷಣಾ ರೀತಿ<br><br>• **ಕಲಿಕೋಪಕರಣಗಳು**<br>- ಸಾಧ್ಯತೆಗಳು<br>- ನಿರ್ಮಾಣ<br><br>• **ಗಣಿತದ ಆಟಗಳು, ಗಣಿತದ ಪಝಿಲ್, ಕಥೆ, ನಿಘಂಟು, ಕವಿತೆ ಇತ್ಯಾದಿಗಳ ತಯಾರಿ ಮತ್ತು ಸಂಗ್ರಹ** | ▲ ಒಂದನೇ ತರಗತಿಯ ಮಕ್ಕಳು ಸಂಖ್ಯೆಗಳನ್ನು ಬರೆಯಲು ಆರಂಭಿಸುವುದು ಯಾವಾಗ? ಅಧ್ಯಾಪಕರು ಇದನ್ನು ಹೇಗೆ ತಿಳಿದುಕೊಳ್ಳುವರು?<br>▲ ಮಕ್ಕಳಿಗೆ ಹೆಚ್ಚು ಕಠಿಣವಾದ ಕ್ರಿಯೆಯು ಭಾಗಾಕಾರವಾಗಿದೆ. ಚರ್ಚೆ ನಡೆಸುವುದು.<br>▲ '1' ಒಂದು ಅವಿಭಾಜ್ಯ ಸಂಖ್ಯೆಯಲ್ಲ – ಯಾಕೆ?<br>■ ಆಯ್ದ ಗಣಿತದ ಆಶಯಗಳನ್ನು ಮೂರು ಹಂತಗಳಲ್ಲಿ ಮಂಡಿಸಲು ಕಲಿಕಾ ಚಟುವಟಿಕೆಗಳನ್ನು ತಯಾರಿಸುವುದು.<br>1) ಮೂರ್ತ ಹಂತ<br>2) ಪ್ರಾತಿನಿಧಿಕ ಹಂತ (representative level) / ಚಿತ್ರ<br>3) ಅಮೂರ್ತ ಹಂತ /ಚಿಹ್ನೆಗಳು.<br><br>• ಪಿಯಾಷೆ, ಬ್ರೂನರ್, ಸ್ಕೈಬ್, ವೈಗೋಟ್‌ಸ್ಕಿ ಮುಂತಾದ ಮನೋವಿಜ್ಞಾನಿಗಳ ಗಣಿತ ಕಲಿಕಾ ಸಿದ್ಧಾಂತಗಳನ್ನು ತಿಳಿದುಕೊಂಡು ಮಕ್ಕಳಿಗೆ ಕಲಿಸುವುದು.<br>• ಗಣಿತಕ್ಕೆ ಸಂಬಂಧಿಸಿದ ತಿಳುವಳಿಕೆಯನ್ನು ಗಳಿಸುವುದಕ್ಕಾಗಿ ಕಲಿಕೆದಾರನನ್ನು ಪ್ರಾಪ್ತಿಗೊಳಿಸುವುದಕ್ಕೆ ಅಗತ್ಯವಾದ ವಿನಿಮಯ ರೀತಿಯನ್ನು ತಿಳಿದುಕೊಳ್ಳುವುದು.<br>• ನೂತನ ಕಲಿಕಾ ವಿಧಾನಗಳ ಪ್ರಯೋಜನವನ್ನು ಪಡೆದುಕೊಂಡು ಗಣಿತ ಕಲಿಕೆಯನ್ನು ಗುಣಾತ್ಮಕವಾಗಿ ಮತ್ತು ಫಲಪ್ರದವಾಗಿ ನಡೆಸುವುದಕ್ಕೆ ಬೇಕಾದ ಸಾಮರ್ಥ್ಯವನ್ನು ಗಳಿಸುವುದು.<br>▲ ವ್ಯತ್ಯಸ್ತ ರೀತಿಯ ಗಣಿತದ ಆಶಯಗಳನ್ನು ವಿನಿಮಯ ಮಾಡಲು ವ್ಯತ್ಯಸ್ತವಾದ ತಂತ್ರ ಹಾಗೂ ವಿಧಾನಗಳನ್ನು ಉಪಯೋಗಿಸಲಾಗುವುದು. ಯಾಕೆ?<br>■ ಪಿಯಾಷೆ, ಬ್ರೂನರ್, ಸ್ಕೈಬ್, ವೈಗೋಟ್‌ಸ್ಕಿ ಮುಂತಾದ ಮನಶಾಸ್ತ್ರಜ್ಞರ ಸಿದ್ಧಾಂತಗಳನ್ನು ಪರಿಶೀಲಿಸಿ ಗಣಿತ ಕಲಿಕೆಯಲ್ಲಿ ಸೈದ್ಧಾಂತಿಕವಾದ ತಿಳುವಳಿಕೆಯನ್ನು ರೂಪಿಸುವುದು.<br>■ ಗಣಿತದ ಮೂಲ ಆಶಯಗಳನ್ನು ವಿವಿಧ ಹಂತಗಳಲ್ಲಿ ಮಂಡಿಸುವಾಗ ಗಮನಿಸಬೇಕಾದ ವಾಸ್ತವಿಕತೆಗಳನ್ನು ಪಿಯಾಷೆಯ ಸಿದ್ಧಾಂತದ ಆಧಾರದಲ್ಲಿ ವಿವರಿಸುವುದು.<br>■ ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಯಾವೆಲ್ಲಾ ತಂತ್ರಗಳನ್ನು ವಿದ್ಯಾರ್ಥಿಗಳು ಬಳಸಬೇಕೆಂದು ಕಂಡುಕೊಳ್ಳಲು, ಆಯ್ಕೆ ಮಾಡಿದ ಸಮಸ್ಯೆಗಳನ್ನು ಅವರು ಹೇಗೆ ಪರಿಹರಿಸುವರೆಂದು ವಿದ್ಯಾರ್ಥಿಗಳಲ್ಲಿ ಕೇಳಿ ತಿಳಿದುಕೊಂಡು ಮಾಹಿತಿ ಸಂಗ್ರಹವನ್ನು ಮಾಡಬೇಕು.<br>■ ಗಣಿತದ ಸಮಸ್ಯೆಗಳನ್ನು ಹೇಳಿಕಾ ರೀತಿಯಲ್ಲಿ ಮಂಡಿಸುವುದಕ್ಕಿಂತ ಚಿಹ್ನೆಗಳನ್ನುಪಯೋಗಿಸಿ ಮಂಡಿಸಲು ಬದಲಾಗುವಂತೆ ಯಾವೆಲ್ಲಾ ಬೋಧನಾ ತಂತ್ರಗಳನ್ನು ಸ್ವೀಕರಿಸಬೇಕೆಂದು ಕಂಡುಹಿಡಿಯುವುದು.<br>■ ಗಣಿತ ಪಝಿಲ್‌ಗಳು, ಗಣಿತದ ಆಟಗಳು, ಮಾಯಾಚೌಕಗಳು, ವಿವಿಧ ಕಲಿಕೋಪಕರಣಗಳನ್ನು ನಿರ್ಮಿಸುವುದು, ಸಂಗ್ರಹಿಸುವುದು, ಟ್ರೈ ಔಟ್ ನಡೆಸುವುದು. |

## ಗಣಿತ – ನಿರಂತರ ಮೌಲ್ಯನಿರ್ಣಯದ ವಿಷಯಗಳು

<table>
<tr>
<td>

1. **ಟಿಪ್ಪಣಿಗಳು**

- ಸ್ಕ್ರಿಪ್ಟ್
- ಚರ್ಚೆ/ಗುಂಪು ಚರ್ಚೆಯ ಮೂಲಕ ರೂಪುಗೊಂಡವುಗಳು
- ಓದಿನ ಮೂಲಕ ಆರ್ಜಿಸಿಕೊಂಡವುಗಳು
- ನಿರೀಕ್ಷಣೆಯ ಮೂಲಕ ತಿಳಿದುಕೊಂಡವುಗಳು
- ವಿಶ್ಲೇಷಣೆ ನಡೆಸಿದವುಗಳು
- ಸಂದರ್ಶನಕ್ಕೆ ಸಂಬಂಧಿಸಿದವುಗಳು
- ಫೀಲ್ಡ್ ಟ್ರಿಪ್ಪಿಗೆ ಸಂಬಂಧಿಸಿದವುಗಳು
- ಪ್ರಬಂಧ
- ಗಣಿತದ ಆಶಯಗಳಿಗೆ ಸಂಬಂಧಿಸಿದವುಗಳು

2. **ಸಂಗ್ರಹ ಮತ್ತು ನಿರ್ಮಾಣ**

- ಗಣಿತದ ಆಶಯಗಳ ರೂಪೀಕರಣಕ್ಕೆ ಸಂಬಂಧಿಸಿದ ಕಲಿಕೋಪಕರಣಗಳು (ನಿರ್ಮಿಸಿದವುಗಳೂ ಸಂಗ್ರಹಿಸಿದವುಗಳೂ)

3. **ಯೂನಿಟ್ ಟೆಸ್ಟ್**
4. **ಸಿಮುಲೇಷನ್ ತರಗತಿಗಳು**
5. **ನೋಟ್ ಬುಕ್ (ಗಣಿತ)**

</td>
<td>

**ನಿರಂತರ ಮೌಲ್ಯನಿರ್ಣಯ ಮಾಡಿ ಅಂಕಗಳನ್ನು ನೀಡುವ ಕ್ರಮ**

1. ಎರಡು ಟಿಪ್ಪಣಿಗಳು ಮಾತ್ರವೇ ಪ್ರೊಫೈಲ್‌ನಲ್ಲಿದ್ದರೆ ಸಾಕು. ಉಳಿದವುಗಳು ಯಥಾಸಮಯ ನೋಟ್‌ಬುಕ್‌ನಲ್ಲಿ ಬರೆದಿದ್ದರೆ ಸಾಕು. ಈ ನೋಟ್‌ಬುಕ್‌ಗಳನ್ನು ನಿರಂತರ ಮೌಲ್ಯನಿರ್ಣಯಕ್ಕಾಗಿ ಪರಿಗಣಿಸಬಹುದು.
2. ಕಲಿಕೋಪಕರಣಗಳನ್ನು ಆಯಾಯ ಸಮಯದಲ್ಲಿ ಮೌಲ್ಯಮಾಪನಗೊಳಿಸಿ ಅಂಕಗಳನ್ನು ನೀಡುವುದು.
3. ಪ್ರತಿಯೊಂದು ಯೂನಿಟಿನ ಕೊನೆಗೆ ಯೂನಿಟ್ಟ್ ಟೆಸ್ಟ್‌ಗಳನ್ನು (Written or Oral (Quiz) type) ನಡೆಸಬಹುದಾಗಿದೆ.

ಮೇಲಿನ 5 ವಿಧಗಳಲ್ಲಿ ಪ್ರತಿಯೊಂದಕ್ಕೂ 10 ಅಂಕಗಳ ವಿಧದಲ್ಲಿ ನೀಡಿ ಒಟ್ಟು 20 ಅಂಕಗಳನ್ನು ನೀಡಬಹುದಾಗಿದೆ.

</td>
</tr>
</table>